# 1.ಜ್ಞಾನ, ಸತ್ಯ ಮತ್ತು ಸಮರ್ಥನೆ

## 1

ಜ್ಞಾನದ ಸಿದ್ಧಾಂತ ಅಥವಾ ಜ್ಞಾನಶಾಸ್ತ್ರವು ಜ್ಞಾನ ಮತ್ತು ಜ್ಞಾನಕ್ಕೆ ಸಂಬಂಧಿಸಿದ ಅನೇಕ ವಿಷಯಗಳ ಮೇಲಿನ ವೈವಿಧ್ಯಮಯವಾದ ಪ್ರಶ್ನೆಗಳ ಕುರಿತು ಕಾಳಜಿ ಹೊಂದಿದೆ. ನಮ್ಮ ಜ್ಞಾನದ ವ್ಯಾಪ್ತಿ ಏನು ? ಎನ್ನುವುದು ನಿಜವಾಗಿಯೂ ಒಂದು ಪ್ರಮುಖ ಪ್ರಶ್ನೆ. ಕೆಲ ತತ್ವ ಶಾಸ್ತ್ರಜ್ಞರು, ವಿಶೇಷವಾಗಿ "ಸಾಮಾನ್ಯ ಜ್ಞಾನ" ಸಂಪ್ರದಾಯಕ್ಕೆ ಸೇರಿದವರು, 'ನಾವು ಯಾವ ವಿಷಯಗಳನ್ನು ತಕ್ಕಮಟ್ಟಿಗೆ ಅರಿತಿದ್ದೇವೆ ಎಂದು ತಿಳಿದಿದ್ದೇವೆಯೋ ಅವುಗಳನ್ನು ಅರಿತಿದ್ದೇವೆ ಎನ್ನುತ್ತಾರೆ.' ಬೇರೆ ಜನರಿದ್ದಾರೆ, ಅವರು ಯೋಚಿಸುತ್ತಾರೆ ಮತ್ತು ಭಾವಿಸುತ್ತಾರೆ, ನಾವು ನಿನ್ನೆ ಜೀವಿಸಿದ್ದೆವು, ಕಾರುಗಳು, ನಾಯಿಗಳು ಇವೆ,-ಹೀಗೆ ಏನೇನೋ ಅರಿತಿರುತ್ತೇವೆ ಎಂದು ಉದಾಹರಣೆ ಕೊಡುತ್ತಾರೆ. ನಾವು ನಮ್ಮ ತತ್ಕಣದ ಭೌತಿಕ ಆವರಣದ ಬಗೆಗೆ, ಇತರ ಜನರ ಬಗೆಗೆ ಮತ್ತು ಭೂತಕಾಲದ ಬಗೆಗೆ ಅರಿತಿರುತ್ತೇವೆ ಎಂದು ಅವರು ನಮಗೆ ತಿಳಿಸುತ್ತಾರೆ.ಇತರರು ತಾವು ಅನೇಕ ನೀತಿ ಶಾಸ್ತ್ರ ಮತ್ತು ಸದಾಚಾರ ಸಂಹಿತೆಯ ಅರಿವನ್ನು ಹೊಂದಿದ್ದೇವೆ ಎಂದು ಸೇರಿಸುತ್ತಾರೆ. ಕೆಲವರು 'ತಾವು ದೇವರ ಮತ್ತು ಮಾನವರ ಬಗ್ಗೆ ದೇವರ ಮನೋವೃತ್ತಿಯ ಕುರಿತಾದ ಅನೇಕ ಸತ್ಯಗಳನ್ನು ಅರಿತಿದ್ದೇವೆ' ಎಂದು ಹೇಳುತ್ತಾರೆ. ಇನ್ನೂ ಅನೇಕ ತತ್ತ್ವಶಾಸ್ತ್ರಜ್ಞರು ಸಂಶಯವಾದದ ವಿವಿಧ ಸ್ವರೂಪಗಳ ಪ್ರಭಾವಕ್ಕೊಳಗಾಗಿ, ನಮಗೆ ತಿಳಿದಿರುವುದು ಇವೆಲ್ಲಕ್ಕಿಂತಲೂ ಕಡಿಮೆ ('ನಾವು ಇವೆಲ್ಲಕ್ಕಿಂತಲೂ ಕಡಿಮೆ ತಿಳಿದು ಕೊಂಡಿದ್ದೇವೆ') ಎನ್ನುತ್ತಾರೆ. ಪರಮಾವಧಿಸಂಶಯವಾದಿಗಳಂತೂ 'ನಾವು ನಿಜವಾಗಿಯೂ ಏನನ್ನೂ ಅರಿತಿಲ್ಲ' ಎನ್ನುತ್ತಾರೆ.

ಈ ದೃಷ್ಟಿಕೋನಗಳನ್ನು ಮೌಲ್ಯಮಾಪನ ಮಾಡುವುದು ಸುಲಭದ ಮಾತಲ್ಲ. ನಾವು ಅವುಗಳ ಬಗ್ಗೆ ಮತ್ತು ಅವುಗಳ ಪರವಾಗಿ, ಅವುಗಳನ್ನು ಮುಂದಿಟ್ಟ ಕಾರಣಗಳ ಬಗ್ಗೆ ಚಿಂತಿಸ ತೊಡಗಿದೊಡನೆ, ಜ್ಞಾನದ ಬಗೆಗಿನ ಇತರ ಪ್ರಶ್ನೆಗಳಿಗೆ ಮುನ್ನೆಡಸಲ್ಪಡುತ್ತೇವೆ. ಇಂತಹ ಚಿಂತನೆಗಳು ಸಹಜವಾಗಿಯೇ ನಮ್ಮನ್ನು "ಜ್ಞಾನ ಎಂದರೇನು? ಎನ್ನುವ ಜ್ಞಾನಶಾಸ್ತ್ರದ ಅತ್ಯಂತ ಪ್ರಮುಖ ಮತ್ತು ಅತ್ಯಂತ ಹಳೆಯ ಪ್ರಶ್ನೆಯ ಕಡೆಗೆ ಮುನ್ನಡೆಸುತ್ತವೆ. ಎರಡು ದಶಸಹಸ್ರ ವರ್ಷಗಳ ಹಿಂದೆಯೇ ಪ್ಲೇಟೋ ತನ್ನ ಸಂವಾದ 'ಥಿಯೆಟೆಟಸ್' ನಲ್ಲಿ (ಥಿಯೆಟೆಟಸ್ನೊಡಗಿನ ತನ್ನ ಸಂವಾದದಲ್ಲಿ) ಈ ವಿಷಯದ ಬಗ್ಗೆ ಸೆಣಸಿದ್ದ. ಪ್ಲೇಟೋ ಜ್ಞಾನಕ್ಕೊಂದು ವ್ಯಾಖ್ಯಾನ ಪಡೆಯ ಬಯಸಿದ್ದ. ಆದರೆ ಯಾವುದೇ ಸ್ಪಷ್ಟತೆ ದೊರೆಯದೇ, ಸಂವಾದ ಅನಿರ್ಧಾರಿತವಾಗಿ ಕೊನೆಗೊಂಡಿತು.

ಜ್ಞಾನಾತ್ಮಕವಾಗಿ ಸಮರ್ಥಿಸಲ್ಪಟ್ಟ ಸತ್ಯವಾದ ನಂಬಿಕೆಯಾಗಿ ಪ್ರಾತಿಪಾದಿಕ ಜ್ಞಾನದ ಸಾಂಪ್ರದಾಯಿಕ ಆಖ್ಯಾನವನ್ನು (ಖಾತೆಯನ್ನು) ಪರಿಚಯಿಸುವುದು ಈ ಅಧ್ಯಾಯದ ಪ್ರಾಥಮಿಕ ಗುರಿ. ಮೊದಲ ವಿಭಾಗದಲ್ಲಿ ಪ್ರಾತಿಪಾದಿಕ ಜ್ಞಾನವನ್ನು ಬೇರೆ ರೀತಿಯ ಜ್ಞಾನಗಳಿಂದ ಪ್ರತ್ಯೇಕಿಸಲಾಗುತ್ತದೆ. ಎರಡನೆಯ ವಿಭಾಗದಲ್ಲಿ ಜ್ಞಾನದ ಸಾಂಪ್ರದಾಯಿಕ ಖಾತೆಯನ್ನು ಪರಿಚಯಿಸಲಾಗುವುದು. ನಂತರ ನಾನು ಸಾಂಪ್ರದಾಯಿಕ ಖಾತೆಯ ಪ್ರಮುಖ ಘಟಕಗಳಾದ ನಂಬಿಕೆ, ಸತ್ಯ, ಮತ್ತು ಜ್ಞಾನಾತ್ಮಕ ಸಮರ್ಥನೆಗಳ ಬಗೆಗೆ ಕೆಲ ಹೇಳಿಕೆ ಗಳನ್ನು ನೀಡುತ್ತೇನೆ.

ಅಂತಿಮವಾಗಿ, ನಾನು ಸಮರ್ಥನೆ, ಸಾಕ್ಷ್ಯಗಳ ಬಗೆಗೆ ಕೆಲ ಸಾಮಾನ್ಯ ಟೀಕೆಗಳನ್ನು ಮಾಡಿ ಸಾಕ್ಷ್ಯಾಧಾರದ ವಿಫಲತೆಯ ಪರಿಚಯ ಮಾಡಿಸುತ್ತೇನೆ.

## 'ಅರಿವಿ'ನ ಮೂರು ಅರ್ಥಗಳು.

ಸಾಮಾನ್ಯ ಭಾಷೆಯಲ್ಲಿ ಯಾರೋ ಏನನ್ನೋ ಅರಿತಿದ್ದಾರೆ ಎಂದಾಗ ಅದನ್ನು ನಾವು ಬೇರೆ ಬೇರೆ ರೀತಿಯಲ್ಲಿ ಅರ್ಥೈಸ ಬಹುದು. ಜ್ಞಾನಕ್ಕೆ ವಿವಿಧ ಅರ್ಥಗಳಿವೆ. ಅಥವಾ ನಾವು ಅವುಗಳನ್ನು ವಿವಿಧ ಪ್ರಕಾರದ ಜ್ಞಾನಗಳು ಇವೆಯೆಂದು ಹೇಳ ಬಹುದು. (ಜ್ಞಾನಗಳು ಎನ್ನಬಹುದು.) ಅವುಗಳಲ್ಲಿ ಮೂರು ಪ್ರಮುಖ ಪ್ರಕಾರಗಳೆಂದರೆ 1. ಪ್ರಾತಿಪಾದಿಕ ಜ್ಞಾನ 2. ಪರಿಚಯ ಜ್ಞಾನ ಅಥವಾ ತತ್ತ್ವಜ್ಞಾನ 3. ಹೇಗೆ ಎನ್ನುವ ಜ್ಞಾನ ಅಥವಾ ಕ್ರಿಯಾ ಜ್ಞಾನ. ನಾವು ಪ್ರಾತಿಪಾದಿಕ ಜ್ಞಾನದೊಂದಿಗೆ ಪ್ರಾರಂಭಿಸೋಣ.

ಪ್ರಾತಿಪಾದಿಕ ಜ್ಞಾನ ತತ್ಯಗಳ ಅಥವಾ ಸತ್ಯವಾದ ಪ್ರತಿಪಾದನೆಗಳ ಜ್ಞಾನ. ಪ್ರಾತಿಪಾದಿಕ ಜ್ಞಾನದ ಕೆಳಗಿನ ಉದಾಹರಣೆಗಳನ್ನು ಗಮನಿಸೋಣ.

1. ಜಾನ್, ಸೀಸರ್ ಹತ್ಯೆಗೀಡಾದ ಎಂದು ಅರಿತಿದ್ದಾನೆ.
2. ಜಾನ್, ಆಕಾಶ ನೀಲಿಯಾಗಿದೆ ಎಂದು ಅರಿತಿದ್ದಾನೆ.

ಈ ಎರಡು ಉದಾಹರಣೆಗಳಲ್ಲಿ ಜ್ಞಾನದ ವಸ್ತು ಅಥವಾ ಯಾವುದು ತಿಳಿಯಲ್ಪಟ್ಟಿದೆಯೋ ಅವು (ಜ್ಞಾತ) ಕ್ರಮವಾಗಿ ನಿಜ ಪ್ರತಿಪಾದನೆಗಳಾದ ಸೀಸರನು ಹತ್ಯೆಗೀಡಾದ ಮತ್ತು ಆಕಾಶ ನೀಲಿಯಾಗಿದೆ ಎನ್ನುವುವಾಗಿವೆ.

ಹೇಳಿಕೆ ಮತ್ತು ಪ್ರತಿಪಾದನೆಗಳ ನಡುವಿನ ವ್ಯತ್ಯಾಸ ಗುರುತಿಸುವುದು ಬಹಳ ಪ್ರಮುಖವಾಗಿದೆ. ಪಾಲ್ ಮತ್ತು ಪಿಯರೆ ಎನ್ನುವ ಇಬ್ಬರನ್ನು ತೆಗೆದು ಕೊಳ್ಳೋಣ. ಇಬ್ಬರೂ ಆಕಾಶ ನೀಲಿಯಾಗಿದೆ ಎಂದು ನಂಬುತ್ತಾರೆ ಎಂದು ಭಾವಿಸೋಣ.ಪಾಲನು ಆಂಗ್ಲ ಭಾಷೆಯನ್ನು ಮಾತ್ರ ಮಾತನ್ನಾಡುತ್ತಾನೆ. ಪಿಯರೆ ಫ್ರೆಂಚ್ ಭಾಷೆಯನ್ನು ಮಾತ್ರ ಮಾತಾಡುತ್ತಾನೆ. ತನ್ನ ನಂಬಿಕೆಯನ್ನು ಅಭಿವ್ಯಕ್ತ ಗೊಳಿಸಲು ಪಾಲ್ " ದಿ ಸ್ಕೆöÊ ಈಸ್ ಬ್ಲೂ" ಎನ್ನುತ್ತಾನೆ ಪಿಯರೆ "ಲೆ ಸೀಲ್ ಎಸ್ಟ ಬ್ಲೂ" ಎನ್ನುತ್ತಾನೆ.ಇಬ್ಬರೂ ಬೇರೆ ಬೇರೆ ವಾಕ್ಯಗಳನ್ನು ಬಳಸಿದರೂ ಇಬ್ಬರೂ ಒಂದೇ ಪ್ರತಿಪಾದನೆಯನ್ನು ನಂಬುತ್ತಾರೆ.ಇಬ್ಬರಿಗೂ ಆಕಾಶ ನೀಲಿಯಾಗಿದೆ ಎನ್ನುವ ಅರಿವಿರುವುದರಿಂದ ಇಬ್ಬರೂ ಒಂದೇ ಪ್ರತಿಪಾದನೆಯನ್ನು ಅರಿತಿದ್ದಾರೆ.

ನಾವು ನಂಬಿಕೆಯನ್ನು ವ್ಯಕ್ತಿ ಮತ್ತು ಪ್ರತಿಪಾದನೆಯ ನಡುವೆ ಇರುವ ಸಂಬAಧ ಎಂದು ಯೋಚಿಸ ಬಹುದು. ಒಬ್ಬ ವ್ಯಕ್ತಿ ನಂಬುತ್ತಿರುವ ಪ್ರತಿಪಾದನೆ ಸತ್ಯವಾದರೆ ಆತನ ನಂಬಿಕೆ ಸತ್ಯ. ಒಬ್ಬ ನಂಬುತ್ತಿರುವ ಪ್ರತಿಪಾದನೆ ಸುಳ್ಳಾದರೆ ಅವನ ನಂಬಿಕೆ ಸುಳ್ಳು. ನಾವು ಪ್ರಾತಿಪಾದಿಕ ಜ್ಞಾನವನ್ನು ಒಬ್ಬ ವ್ಯಕ್ತಿ ಮತ್ತು ಪ್ರತಿಪಾದನೆಯ ನಡುವೆ ಇರುವ ಸಂಬAಧ ಎಂದು ಪರಿಗಣಿಸ ಬಹುದು. ಹೆಚ್ಚು ಸ್ಪಷ್ಟವಾಗಿ ಪ್ರಾತಿಪಾದಿಕ ಜ್ಞಾನ ಒಬ್ಬ ವ್ಯಕ್ತಿ ಮತ್ತು ಸತ್ಯವಾದ ಪ್ರತಿಪಾದನೆಯ ನಡುವೆ ಇರುವ ಸಂಬAಧ.

ಪ್ರಾತಿಪಾದಿಕ ಜ್ಞಾನ ಮಾತ್ರವೇ ಜ್ಞಾನದ ವಿಧವಲ್ಲ. ಉದಾಹರಣೆಗೆ ಯಾರೋ ಒಬ್ಬರು ಈ ಕೆಳಗಿನ ಸಮರ್ಥನೆಯನ್ನು ಮಾಡಿದರೆಂದು ಕಲ್ಪಿಸೋಣ;

1. ಜಾನನು ಸಂಯುಕ್ತ ರಾಷ್ಟ್ರಗಳ ಅಧ್ಯಕ್ಷರನ್ನು ಅರಿತಿದ್ದಾನೆ.
2. ಜಾನನು ಪೋಪರನ್ನು ಅರಿತಿದ್ದಾನೆ.

(ಹಕ್ಕು ಸಾಧನೆಗಳನ್ನು ನಾವು ಸಹಜವಾಗಿ ಜಾನನು)

3. ಸಂಯುಕ್ತ ರಾಷ್ಟ್ರಗಳ ಅಧ್ಯಕ್ಷರೊಡನೆ ಪರಿಚಯ ಹೊಂದಿದ್ದಾನೆ,
4. ಜಾನನು ಪೋಪರೊಂದಿಗೆ ಪರಿಚಯ ಹೊಂದಿದ್ದಾನೆ)

ಈ ಹೇಳಿಕೆಗಳನ್ನು ನಾವು ಸಹಜವಾಗಿ 1. ಜಾನಗೆ ಅಮೇರಿಕಾ ಅಧ್ಯಕ್ಷನ ಪರಿಚಯವಿದೆ 2. ಜಾನಗೆ ಪೋಪರ ಪರಿಚಯವಿದೆ ಎಂದು ಅರ್ಥೈಸಿಕೊಳ್ಳಬಹುದು. ನಾವು ಸಹಜವಾಗಿ ಮೂರು ಮತ್ತು ನಾಲ್ಕನ್ನು ಜಾನನು ಅವರನ್ನು ಭೇಟಿ ಮಾಡಿದ್ದಾನೆ ಎಂದು ಅರ್ಥೈಸಿಕೊಳ್ಳಬಹುದು. ನಾವು ಮೂರು ಮತ್ತು ನಾಲ್ಕನ್ನು ಈ ರೀತಿಯಲ್ಲಿ ತೆಗೆದು ಕೊಂಡರೆ ಜಾನನ ಮೇಲೆ ಪರಿಚಯ ಜ್ಞಾನದ ಆರೋಪ ಮಾಡುತ್ತಿದ್ದೇವೆ. ಜಾನನಿಗೆ ಯಾರೋ ಒಬ್ಬರ ಪರಿಚಯ ಜ್ಞಾನ ಅಥವಾ ಗುರುತು ಜ್ಞಾನವಿದೆ ಎನ್ನುವುದು ಆತ ಅವರನ್ನು ಭೇಟಿಯಾಗಿದ್ದಾನೆ ಅಥವಾ ಅವನಿಗೆ ಅವರ ಗುರುತಿದೆ ಎನ್ನುವ ಅರ್ಥ ಮೂಡಿಸುತ್ತದೆ.

ಪರಿಚಯ ಜ್ಞಾನ ಅಥವಾ ಗುರುತು ಜ್ಞಾನವನ್ನು ಪ್ರಾತಿಪಾದಿಕ ಜ್ಞಾನದಿಂದ ವ್ಯತ್ಯಾಸಿಸ ಬೇಕು. ಒಬ್ಬ ವ್ಯಕ್ತಿಯ ಬಗೆಗೆ ಪರಿಚಯ ಜ್ಞಾನವಿಲ್ಲದೆಯೆ ಸಾಕಷ್ಟು ಪ್ರಾತಿಪಾದಿಕ ಜ್ಞಾನವನ್ನು ನಿಸ್ಸಂದಿಗ್ಧವಾಗಿ ಹೊಂದ ಬಹುದು. ನಾನು ಅಧ್ಯಕ್ಷರ ಬಗೆಗೆ ಸಾಕಷ್ಟು ಪ್ರಾತಿಪಾದಿಕ ಜ್ಞಾನ ಹೊಂದಿರಬಹುದು. ಅವರು ಇಂತಹ ದಿನ ಜನಿಸಿದರು ಮತ್ತು ಇಂತಹ ವಿಶ್ವವಿದ್ಯಾಲಯಕ್ಕೆ ಹಾಜರಾಗಿದ್ದರು ಎಂದು ನನಗೆ ತಿಳಿದಿರಬಹುದು. * ಹೀಗೆ ಅವರ ಬಗ್ಗೆ ಅನೇಕ ಪ್ರತಿಪಾದನೆಗಳು ತಿಳಿದಿರಬಹುದು

(ಅವರ ಬಗೆಗಿನ ಹೀಗಿರುವ ಅನೇಕ ಪ್ರತಿಪಾದನೆಗಳನ್ನು ನಾನು ತಿಳಿದಿರಬಹುದು.) ನನಗೆ ಅಧ್ಯಕ್ಷರ ಬಗೆಗೆ ಸಾಕಷ್ಟು ಪ್ರಾತಿಪಾದಿಕ ಜ್ಞಾನವಿದ್ದರೂ ನನಗೆ ಅಧ್ಯಕ್ಷರ ಬಗೆಗೆ ಪರಿಚಯ ಜ್ಞಾನ ಇದೆ ಎನ್ನುವ ಅರ್ಥ ಆಗುವುದಿಲ್ಲ. ಏಕೆಂದರೆ ನಾನು ಅವರನ್ನು ಭೇಟಿಯಾಗದೇ ಇರಬಹುದು ಮತ್ತು ಅವರ ಗುರುತು ನನಗೆ ಇರದಿರಬಹುದು.

ಸಾಮಾನ್ಯ ಭಾಷೆಯಲ್ಲಿ ನಾವು “ಏ” ಗೆ “ಬಿ” ಗೊತ್ತು ಎಂದಾಗ

(“ಎ” ಯು “ಬಿ”ಯನ್ನು ಅರಿತಿದ್ದಾನೆ” ಎಂದಾಗ) ಕೆಲವೊಮ್ಮೆ ಪ್ರಾತಿಪಾದಿಕ ಅರ್ಥದಲ್ಲೂ ಕೆಲವೊಮ್ಮೆ ಪರಿಚಯ ಜ್ಞಾನದ ಅರ್ಥದಲ್ಲೂ ಬಳಸುತ್ತೇವೆ. ಉದಾಹರಣೆಗೆ ಪತ್ತೆದಾರನೊಬ್ಬ ಗಂಭೀರವಾಗಿ “ ಈ ಕೊಲೆಗಾರನನ್ನು ನಾನು ಬಲ್ಲೆ, ಅವನು ಇನ್ನೊಮ್ಮೆ ಶೀಘ್ರದಲ್ಲೇ ಕೊಲೆ ಮಾಡುವವನಿದ್ದಾನೆ” ಎನ್ನುತ್ತಾನೆ ಎಂದು ಇಟ್ಟುಕೊಳ್ಳೋಣ. ನಮ್ಮ ಪತ್ತೆದಾರ ವಾಸ್ತವವಾಗಿ ಕೊಲೆಗಾರನನ್ನು ಭೇಟಿಮಾಡಿದ್ದಾನೆ ಎಂದಾಗಲೀ ಅವನಿಗೆ ಕೊಲೆಗಾರನ ಪರಿಚಯ ಇದೆ ಎಂದಾಗಲೀ ಅರ್ಥೈಸ ಬೇಕಾಗಿಲ್ಲ. ಅವನು ಕೊಲೆಗಾರ ಮತ್ತೊಮ್ಮೆ ಕೊಲೆ ಮಾಡುವವನಂತಹವನು ಎನ್ನುವ ಭಾವದಲ್ಲಿ ಹೇಳುತ್ತಿರಬಹುದು

(ಅವನು ಸರಳವಾಗಿ ಕೊಲೆಗಾರ ಮತ್ತೊಮ್ಮೆ ಕೊಲೆ ಮಾಡುವ ವಿಧದವನು ಎನ್ನುವ ಭಾವದಲ್ಲಿ ತಿಳಿಸಿರ ಬಹುದು)

ಪತ್ತೆದಾರನಿಗೆ ಕೊಲೆಗಾರನ ಬಗೆಗೆ ಒಂದು ವಿಧದ ಪ್ರಾತಿಪಾದಿಕ ಜ್ಞಾನವಿದೆ.

ಹೀಗೆಯೇ ಜಾನನಿಗಿರುವ ಸೀಸರನ ಆಳವಾದ ಜ್ಞಾನದಿಂದ (ಜ್ಞಾನವಿಸ್ತಾರದಿಂದ) ಪ್ರಭಾವಿತನಾದ ನಾನು “ಜಾನನಿಗೆ ಸೀಸರನ ಬಗೆಗೆ ನಿಜಕ್ಕೂ ತಿಳಿದಿದೆ” ಎಂದೆನ್ನ ಬಹುದು. ನಾನು ಜಾನನಿಗೆ ಸೀಸರನ ಬಗೆಗೆ ಅಪಾರವಾದ ಪ್ರಾತಿಪಾದಿಕ ಜ್ಞಾನವಿದೆ ಎಂದು

ಮನಗಾಣಿಸಲು ಪ್ರಯತ್ನಸುತ್ತಿದ್ದೇನೆಯೇ ಹೊರತು ಜಾನ್ ಸೀಸರನನ್ನು ಭೇಟಿ ಮಾಡಿದ್ದ ಎಂದಲ್ಲ.

ಒಬ್ಬನಿಗೆ ವ್ಯಕ್ತಿಗಳ ಹೊರತಾಗಿ ವಸ್ತುಗಳ ಗುರುತು ಜ್ಞಾನ ಇರುವುದು ಸಾಧ್ಯ. ಉದಾಹರಣೆಗೆ sentence missing ಒಬ್ಬ ಪ್ಯಾರಿಸ್ ನಗರದಲ್ಲಿದ್ದರೆ ಪ್ಯಾರಿಸ್ ನಗರದ ಪರಿಚಯ ಜ್ಞಾನ, ಅಥವಾ ಮಾವಿನ ಹಣ್ಣಿನ ರುಚಿಯನ್ನು ಕಂಡಿದ್ದರೆ ಮಾವಿನ ಹಣ್ಣಿನರುಚಿಯ ಪರಿಚಯಜ್ಞಾನ ಹೊಂದುವುದು ಸಾಧ್ಯ. ನಾವು ಈ ರೀತಿಯಾದಂತಹ ಜ್ಞಾನವನ್ನು ಪ್ರತಿಪಾದಿಸುವ ಜ್ಞಾನದಿಂದ ಪ್ರತ್ಯೇಕಿಸ ಬೇಕಾಗುವ ಅಗತ್ಯವಿದೆ.

(ನಾವು ಈ ರೀತಿಯ ಪ್ರಾತಿಪಾದಿಕ ಜ್ಞಾನದ ವ್ಯತ್ಯಾಸ ತಿಳಿಯುವ ಅಗತ್ಯವಿದೆ.)

ಒಬ್ಬ ಪ್ಯಾರಿಸ್ ಕುರಿತು ಪ್ರಾತಿಪಾದಿಕವಾಗಿ ನಗರದ ಪ್ರಮುಖ ಹೆದ್ದಾರಿಗಳ ಬಗೆಗೆ, ನಗರ ಸ್ಥಾಪನೆಯಾದ ಕಾಲದ ಬಗೆಗೆ, ವಿವಿಧ ನೆಲಗುರುತುಗಳ ಬಗೆಗೆ ವಾಸ್ತವವಾಗಿ ಅಲ್ಲೇ ಇದ್ದು ಪಡೆಯುವ ಗುರುತು ಜ್ಞಾನಕ್ಕಿಂತ ಬೇರೆ ರೀತಿಯಲ್ಲಿ ಜ್ಞಾನ ಹೊಂದಿರಬಹುದು.

ಪ್ರಾತಿಪಾದಿಕ ಜ್ಞಾನ, ಪರಿಚಯ ಜ್ಞಾನಗಳ ಜೊತೆಗೆ 'ಹೇಗೆ' ಅಥವಾ ಕ್ರಿಯಾಜ್ಞಾನವನ್ನು ವಿವೇಚಿಸೋಣ. ಕೆಲವು ವೇಳೆ ನಾವು 'ಎ' 'ಎಕ್ಸ'ನ್ನು ಹೇಗೆ ಮಾಡುವುದು ಎಂದು ತಿಳಿದಿದ್ದಾನೆ' ಎಂದಾಗ 'ಎ' ಗೆ ಎಕ್ಸನ್ನು ಮಾಡುವ ಸಾಮರ್ಥ್ಯವಿದೆ ಎಂದು ಅರ್ಥೈಸುತ್ತೇವೆ. ಅನೇಕ ಸಂದರ್ಭಗಳಲ್ಲಿ 'ಎ ಗೆ ಎಕ್ಸನ್ನು ಹೇಗೆ ಮಾಡುವುದು ತಿಳಿದಿದೆ' ಎಂದಾಗ ಅವನಿಗೆ ಅದನ್ನು ಮಾಡುವ ಸಾಮರ್ಥ್ಯವಿದೆ ಎನ್ನುವ ಅರ್ಥ ಬರುವುದಿಲ್ಲ. 'ಎ' 'ಎಕ್ಸನ್ನು' ಹೇಗೆ ಎಂದು ತಿಳಿದಿದ್ದಾನೆ ಎಂದಾಗ 'ಎ' ಎಕ್ಸನ್ನು ಮಾಡುವ ಸಾಮರ್ಥ್ಯ ಹೊಂದಿದ್ದಾನೆ ಎನ್ನುವ ಅರ್ಥ ಒಂದೆಡೆಯಲ್ಲಿ ಬಂದರೆ ಇನ್ನೊಂದೆಡೆಯಲ್ಲಿ ಆತ ಆ ಸಾಮರ್ಥ್ಯ ಹೊಂದಿಲ್ಲ ಎನ್ನುವ ಅರ್ಥ ಬರಬಹುದು. ಮೊದಲ ಅರ್ಥದ ಪ್ರಕಾರ ' ಹೇಗೆ ಎನ್ನುವುದನ್ನು ಅರಿತು ಕೊಳ್ಳುವುದು'

(5)ಜಾನನು ಸೊನಾಟ ಪಿಯಾನೊವನ್ನು ಹೇಗೆ ನುಡಿಸ ಬೇಕು ಎಂದು ಅರಿತಿದ್ದಾನೆ ಎನ್ನುವುದು

(6) ಜಾನನಿಗೆ ಸೊನಾಟ ಪಿಯಾನೊವನ್ನು ನುಡಿಸುವ ಸಾಮರ್ಥ್ಯವಿದೆ ಎನ್ನುವ ಅರ್ಥ ನೀಡುತ್ತದೆ.

(ಆದರೆ ಮತ್ತೊಮ್ಮೆ ಅದೇ 'ಹೇಗೆಂಬ ಅರಿವಿಗೆ' ಅವನಿಗೆ ಆ ಸಾಮರ್ಥ್ಯವಿದೆ ಎನ್ನುವುದನ್ನು ಸೂಚಿಸದೇ ಇರುವ ಸಂದರ್ಭವೂ ಇದೆ.) ಆದರೆ ಇನ್ನೊಂದು ಸಂದರ್ಭದಲ್ಲಿ 'ಎಕ್ಸ' ಅನ್ನು ಹೇಗೆ ಮಾಡುವುದೆಂಬುದರ ಜ್ಞಾನವು 'ಎಕ್ಸ' ಅನ್ನು ಮಾಡಬಲ್ಲ ಸಾಮರ್ಥ್ಯವಿದೆ ಎಂಬ ಅರ್ಥವನ್ನು ಸೂಚಿಸುವುದಿಲ್ಲ

ಈ ಎರಡನೆಯ ಪ್ರಮೇಯವನ್ನು ಪ್ರಶಂಸಿಸಲು ನಾವು ಜಾನ್ ಒಬ್ಬ ಪ್ರತಿಭಾವಂತ ಪಿಟೀಲು ವಾದಕ ಎಂದು ಭಾವಿಸೋಣ. ಅವನು ಸಂಗೀತವನ್ನು ಚನ್ನಾಗಿಯೇ ಓದ ಬಲ್ಲ ಆದರೆ ಪಿಯಾನೋವನ್ನು ನುಡಿಸಲಾರ ಎಂದು ಭಾವಿಸೋಣ. ಅವನಿಗೆ ಪಿಯಾನೊದಲ್ಲಿ ಒಂದು ನಿರ್ದಿಷ್ಟವಾದ ಸೊನಾಟವನ್ನು ನುಡಿಸಲು ಬಹಳಷ್ಟು ಜ್ಞಾನವಿದೆ ಎಂದು ಭಾವಿಸೋಣ

(ಅವನಿಗೆ ಯಾವುದೋ ನಿರ್ದಿಷ್ಟವಾದ ಸೊನಾಟ ಪಿಯಾನೋವನ್ನು ಹೇಗೆ ನುಡಿಸುವುದೆಂಬ ಜ್ಞಾನ ಇದೆ ಎಂದು ಕಲ್ಪಿಸೋಣ.) ಉದಾಹರಣೆಗೆ ಅವನಿಗೆ ಬಲ ತೋರ್ಬೆರಳು ಇದೇ ಸ್ವರ ನುಡಿಸ ಬೇಕು, ಬಲ ಹೆಬ್ಬೆರಳು ಇದೇ ಸ್ವರ ನುಡಿಸಬೇಕು, ಮುಂತಾದ

ಸಂಗತಿಗಳು ತಿಳಿದಿರಬಹುದು. ನಿಜಕ್ಕೂ ತಾನೇ ನುಡಿಸಲಾಗದಿದ್ದರೂ ಜಾನ್ ಅತ್ಯಂತ ಸ್ಪಷ್ಟವಾಗಿ ಹೇಗೆ ನುಡಿಸಬೇಕು ಎಂದು ವಿವರಿಸಲು ಶಕ್ತನಾಗಿರ ಬಹುದು.

ಈ ಸಂದರ್ಭದಲ್ಲಿ ನಾವು ಜಾನಗೆ ಸೊನಾಟವನ್ನು ನುಡಿಸುವ ಸಾಮರ್ಥ್ಯವಿಲ್ಲದಿದ್ದರೂ ಅದನ್ನು (ಜಾನನು ಸೊನಾಟವನ್ನು ನುಡಿಸಲು ಶಕ್ತನಾಗಿರದಿದ್ದರೂ ಅದನ್ನು)ಹೇಗೆ ನುಡಿಸಬೇಕೆಂದು ಅರಿತಿದ್ದಾನೆ ಎನ್ನುತ್ತೇವೆ. ಈ ಅರ್ಥದಲ್ಲಿ 'ಹೇಗೆಂಬ ಅರಿವು' (5)ನೆಯ ಹೇಳಿಕೆ (6) ನೆಯ ಹೇಳಿಕೆಯ ಅರ್ಥ ನೀಡುವುದಿಲ್ಲ.

ಆದ್ದರಿಂದ 'ಹೇಗೆಂಬ ಅರಿವಿಗೆ' ಕೇವಲ ಹೇಗೆ ಮಾಡಬೇಕೆಂಬ ಪ್ರಾತಿಪಾದಿಕ ಜ್ಞಾನ ಹೊಂದಿರುವುದು ಎನ್ನುವ ಸರಳ ಅರ್ಥವೂ ಇದೆ. ಪಿಟೀಲುಗಾರ ಜಾನನಿಗೆ ಸೊನಾಟ ಪಿಯಾನೊವನ್ನು ಹೇಗೆ ನುಡಿಸಬೇಕೆಂಬ ಅಪಾರವಾದ ಪ್ರಾತಿಪಾದಿಕ ಜ್ಞಾನವಿದೆ. ಆದರೆ 'ಹೇಗೆಂಬ ಅರಿವಿನ' ಇನ್ನೊಂದು ಅರ್ಥದಲ್ಲಿ ಅವನಿಗೆ ಸೊನಾಟ ಪಿಯಾನೊವನ್ನು ಹೇಗೆ ನುಡಿಸ ಬೇಕೆಂಬ ಅರಿವು ಇಲ್ಲ. ಏಕೆಂದರೆ ಆತನಿಗೆ ಸೊನಾಟ ಪಿಯಾನೋ ನುಡಿಸುವ ಸಾಮರ್ಥ್ಯದ ಕೊರತೆ ಇದೆ.

ಈ ಸಂಗತಿ ಒಬ್ಬನು ಏನನ್ನೋ ಹೇಗೆ ಮಾಡಬೇಕೆಂಬ ಸಾಮರ್ಥ್ಯ ಹೊಂದಿರದಿದ್ದರೂ ಅದನ್ನು ಹೇಗೆ ಮಾಡಬೇಕೆಂಬ ಸಾಮರ್ಥ್ಯದ ಕುರಿತು ಪ್ರಾತಿಪಾದಿಕ ಜ್ಞಾನ ಹೊಂದಿರಬಹುದು. ವ್ಯತಿರಿಕ್ತವಾಗಿ ಒಬ್ಬನಿಗೆ ಯಾವುದರ ಬಗೆಗೋ ಬಹಳಷ್ಟು ಪ್ರಾತಿಪಾದಿಕ ಜ್ಞಾನವಿಲ್ಲದೇ ಅದನ್ನು ಮಾಡುವ ಸಾಮರ್ಥ್ಯವಿರ ಬಹುದು. ಇದನ್ನು ತಿಳಿಯಲು, ಹೇಗೆ ನಡೆಯ ಬೇಕೆಂಬ ಅಪಾರ ಪ್ರಾತಿಪಾದಿಕ ಜ್ಞಾನವುಳ್ಳ ಶರೀರಶಾಸ್ತ್ರಜ್ಞನನ್ನು ಕಲ್ಪಿಸೋಣ. ಆತ ನಡೆಯಲು ಒಬ್ಬ ವ್ಯಕ್ತಿ ಹೇಗೆ ಒಂದು ಪಾದದಿಂದ ಮತ್ತೊಂದು ಪಾದಕ್ಕೆ ಭಾರವನ್ನು ವರ್ಗಾಯಿಸಬೇಕು, ಹೇಗೆ ಮೊಳಕಾಲನ್ನು ಬಾಗಿಸಬೇಕು, ಹೇಗೆ ಪಾದಗಳು ಬಾಗಬೇಕು, ಯಾವ ಸ್ನಾಯುಗಳು ಈ ಪ್ರಕ್ರಿಯೆಲ್ಲಿ ಒಳಗೊಂಡಿವೆ ಮುಂತಾದ ವಿಷಯಗಳನ್ನು ಅಧ್ಯಯನ ಮಾಡಿದ್ದಾನೆ. ನಮ್ಮ ಪರಿಣಿತನಿಗೆ ನಡಿಗೆಯ ಬಗೆಗೆ ಅಪಾರವಾದ ಪ್ರಾತಿಪಾದಿಕ ಜ್ಞಾನವಿದೆ. ಈಗ ಪುಟ್ಟ ಮೇರಿಯನ್ನು ಪರಿಗಣಿಸೋಣ. ಮೇರಿ ಹತ್ತು ತಿಂಗಳ ಮಗು. ಈಗ ತಾನೆ ನಡೆಯಲು ಕಲಿಯುತ್ತಿದ್ದಾಳೆ. ಆಕೆಗೆ ಹೇಗೆ ನಡೆಯಬೇಕು ಎಂಬುದು ತಿಳಿದಿದೆ.

ಆದರೆ ಅವಳಿಗೆ ನಮ್ಮ ಪರಿಣಿತರಲ್ಲಿರುವ ಹೇಗೆ ನಡೆಯ ಬೇಕೆಂಬ ಅಪಾರ ಪ್ರಾತಿಪಾದಿಕ ಜ್ಞಾನದ ಕೊರತೆಯಿದೆ ಎಂದು ಸುಲಭವಾಗಿಯೇ ಊಹಿಸಬಹುದು. ಮೇರಿಯಲ್ಲಿ ನಡಿಗೆಯ ಬಗೆಗಿನ ಪ್ರಾತಿಪಾದಿಕ ಜ್ಞಾನವೇನಾದರೂ ಇದ್ದರೆ ಅದು ಅತ್ಯಲ್ಪ.

ನಾವು ಪ್ರಾತಿಪಾದಿಕ ಜ್ಞಾನವನ್ನು ಹೇಗೆ ಮಾಡ ಬೇಕೆಂಬ ಕುರಿತಾದ ಪರಿಚಯ ಜ್ಞಾನ ಮತ್ತು ಹೇಗೆ ಮಾಡ ಬೇಕೆಂಬ ಜ್ಞಾನಗಳಿಂದ ಪ್ರತ್ಯೇಕಿಸಿದ್ದೇವೆ. ಸಾಂಪ್ರದಾಯಿಕವಾಗಿ ತತ್ತ್ವಶಾಸ್ತ್ರಜ್ಞರು ಪ್ರಾತಿಪಾದಿಕ ಜ್ಞಾನದ ಬಗೆಗೆ ಕಾಳಜಿ ಹೊಂದಿದ್ದಾರೆ. ತತ್ತ್ವಶಾಸ್ತ್ರಜ್ಞರು ವಿಶಿಷ್ಟವಾಗಿ ಸತ್ಯ ಎಂದರೇನು ಎನ್ನುವುದರ ಬಗೆಗೆ ಕಾಳಜಿ ಹೊಂದಿರುವುದೇ ಇದಕ್ಕೆ ಒಂದು ಕಾರಣ. ಅವರು ಸತ್ಯ ಎಂದರೇನು ಎಂದು ತಿಳಿಯಲು ಮತ್ತು ತಮ್ಮ ಸಮರ್ಥನೆಯನ್ನು ಇತರರ ಸಮರ್ಥನೆಯ ಜೊತೆಗೆ ವಿಮರ್ಶಿಸಿ, ಬೆಲೆ ಕಟ್ಟಿ ಸತ್ಯವನ್ನು ಅರಿಯಲು ಅಪೇಕ್ಷಿಸುತ್ತಾರೆ.

ಉದಾಹರಣೆಗೆ, ತತ್ತ್ವಶಾಸ್ತ್ರಜ್ಞರು ನಮ್ಮ ಜ್ಞಾನದ ವಿಸ್ತಾರದ ಬಗೆಗೆ ಕೇಳಿದಾಗ ಅವರು ವಿಶಿಷ್ಟವಾಗಿ ನಾವು ತಿಳಿದಿರುವ ಸತ್ಯಗಳ ಪರಿಮಿತಿಯನ್ನು ಅಥವಾ ನಮ್ಮ ಪ್ರಾತಿಪಾದಿಕ ಜ್ಞಾನದ ವಿಸ್ತಾರವನ್ನೇ ಕೇಳುತ್ತಿರುತ್ತಾರೆ. ಯಾವಾಗ ಒಬ್ಬ ತತ್ತ್ವಶಾಸ್ತ್ರಜ್ಞ ಆತ ಬಾಹ್ಯ ವಸ್ತುಗಳನ್ನು ತಿಳಿದಿದ್ದೇನೆ, ಎಂದು ಹೇಳಿದ್ದನ್ನು ಇನ್ನೊಬ್ಬ ತತ್ತ್ವಶಾಸ್ತ್ರಜ್ಞ

ನಿರಾಕರಿಸುತ್ತಾನೋ ಆಗ ಅವರು ಒಂದು ವಿಧವಾದ ಪ್ರಾತಿಪಾದಿಕ ಜ್ಞಾನ ಇದೆ ಎನ್ನುವುದರ ಬಗ್ಗೆ ಭಿನ್ನಾಭಿಪ್ರಾಯ ಹೊಂದಿರುತ್ತಾರೆ.

ಅವರು ಯಾವುದೋ ನಿರ್ದಿಷ್ಟ ರೀತಿಯ ಸತ್ಯಗಳಿವೆ ಎನ್ನುವುದರ ಬಗೆಗೆ ಭಿನ್ನಾಭಿಪ್ರಾಯ ಸೂಚಿಸುತ್ತಿದ್ದಾರೆ. 'ಹೇಗೆಂಬ ಅರಿವು' ಮತ್ತು 'ಗುರುತು ಅರಿವುಗಳು' ಇದೇ ರೀತಿಯಲ್ಲಿ 'ಸತ್ಯ ಕೇಂದ್ರೀಕೃತ' ಜ್ಞಾನ ಪ್ರಕಾರಗಳಲ್ಲ. ಆದ್ದರಿಂದ ಈಗ ನಾವು ಪ್ರಾತಿಪಾದಿಕ ಜ್ಞಾನದ ಪರಿಕಲ್ಪನೆಯನ್ನು ಹೆಚ್ಚು ನಿಕಟವಾಗಿ ಗಮನಿಸೋಣ.

## ಪ್ರಾತಿಪಾದಿಕ ಜ್ಞಾನ ಮತ್ತು ಸಮರ್ಥಿತ ಸತ್ಯ ನಂಬಿಕೆ.

ನಾವು ಈ ಪ್ರಬಂಧದ ಪ್ರಾರಂಭದಲ್ಲಿಯೇ "ಜ್ಞಾನ ಎಂದರೇನು?" ಎನ್ನುವುದು ತುಂಬಾ ಪುರಾತನವಾದದ್ದು ಎಂದು ಟಿಪ್ಪಣಿ ಮಾಡಿದ್ದೆವು. ಈಗ ನಮ್ಮ ಒತ್ತು ಪ್ರಾತಿನಿದಿಕ ಜ್ಞಾನದ ಮೇಲಿರುವುದರಿಂದ "ಯಾರೊಬ್ಬನು ಪ್ರಾತಿನಿಧಿಕ ಜ್ಞಾನ ಹೊಂದಿರುವುದು" ಎಂದರೇನು? "ಪರ್ಯಾಯವಾಗಿ 'ಎಸ್' ಎನ್ನುವ ವ್ಯಕ್ತಿ 'ಪಿ' (ಪಿ ಎನ್ನುವುದು ಒಂದು ಪ್ರತಿಪಾದನೆಯಾಗಿರುವಲ್ಲಿ)' ಯನ್ನು ತಿಳಿದಿದ್ದಾನೆ ಎಂದರೇನು?" ಎಂದು ಕೇಳಬಹುದು.

ಸಾಂಪ್ರದಾಯಿಕ ದೃಷ್ಟಿ ಕೋನದಲ್ಲಿ 'ಎಸ್' ಉ 'ಪಿ'ಯ ಪ್ರತಿಪಾದಿಕ ಜ್ಞಾನ ಹೊಂದುವುದೆಂದರೆ 'ಪಿ'ಯ ಬಗೆಗಿನ ಜ್ಞಾನಾತ್ಮಕವಾಗಿ ಸಮರ್ಥಿತ ಸತ್ಯವಾದ ನಂಬಿಕೆಗಳನ್ನು ಹೊಂದುವುದು. ಸಾಂಪ್ರದಾಯಿಕ ದೃಷ್ಟಿಕೋನವನ್ನು (ನೋಟವನ್ನು) ಪರಿಗಣಿಸುವ ಮೊದಲು ಈ ಕೆಳಗಿನ ಸ್ಪಷ್ಟವಾಗಿ ತಪ್ಪಾಗಿ ಗ್ರಹಿಸಿರುವ (ತಿಳಿಯಲ್ಪಟ್ಟ) ದೃಷ್ಟಿಕೋನವನ್ನು ಪರಿಗಣಿಸೋಣ;

ಡಿ 1 'ಎಸ್' ಗೆ 'ಪಿ'ಯ ಜ್ಞಾನವಿದೆ= 'ಎಸ್' 'ಪಿ'ಯನ್ನು ನಂಬುತ್ತಾನೆ.

ಡಿ 1 ಪ್ರಕಾರ ಯಾವುದನ್ನೋ ನಂಬುವುದೇ ಅದನ್ನು ತಿಳಿಯಲು ಸಾಕು. ಡಿ 1 ಸರಿಯಾಗಿದ್ದರೆ ತಪ್ಪು ಪ್ರತಿಪಾದನೆಯನ್ನು ನಂಬಿದವನೂ ಅದನ್ನು ಅರಿತಿದ್ದಾನೆ ಎಂದಾಗುತ್ತದೆ. ಉದಾಹರಣೆಗೆ ಒಂದು ಮಗು 2+3= 6 ಎಂದು ನಂಬಿದೆ. ಡಿ 1 ಪ್ರಕಾರ ಮಗುವಿಗೆ 2+3= 6 ಎಂದು ತಿಳಿದಿದೆ. ಆದರೆ ನಿಜಕ್ಕೂ ಮಗುವಿಗೆ ಅದು ತಿಳಿದಿಲ್ಲ. ಆದ್ದರಿಂದ ಡಿ 1 ತಪ್ಪು.

ಜನರು ಕೆಲ ಬಾರಿ ಅವರು ತಪ್ಪು ವಿಷಯಗಳನ್ನು ತಿಳಿದಿದ್ದಾರೆ ಎಂದು ಸೇರಿಸುತ್ತಾರೆ. ಉದಾಹರಣೆಗೆ ಕಾಲ್ಚೆಂಡಿನ ಅಭಿಮಾನಿಯೊಬ್ಬ ಅವರ ತಂಡ ಛಾಂಪಿಯನ್‌ಶಿಪ್ ಗೆಲ್ಲುತ್ತದೆ ಎಂದು ಅತ್ಯಂತಿಕವಾಗಿ ನಂಬಿದ್ದಾನೆ. ತಂಡ ಸೋತಾಗ " ನಾನು ಅವರು ಗೆಲ್ಲುತ್ತಾರೆ ಎಂದು ತಿಳಿದಿದ್ದೆ" ಎನ್ನಬಹುದು. 1. ಅವರು ಗೆಲ್ಲದಿದ್ದುದು ತುಂಬಾ ಕೆಟ್ಟದಾಯಿತು ಆದರೆ ನಮ್ಮ ಅಭಿಮಾನಿ ಕೇವಲ ಅವರು ಗೆಲ್ಲುತ್ತಾರೆ ಎಂದು ತಿಳಿದುಕೊಂಡಿದ್ದಲ್ಲ: ಅವರು ಗೆದ್ದೇ ಗೆಲ್ಲುತ್ತಾರೆ ಎಂಬ ಗಟ್ಟಿ ವಿಶ್ವಾಸ ಹೊಂದಿದ್ದ ಅಥವಾ ಮನಗಂಡಿದ್ದ. ಅವನ ಅರಿವಿನ ಸಮರ್ಥನೆ, "ನಾನು ಹಸಿವಿನಿಂದ ಸಾಯುತ್ತಿದ್ದೇನೆ" ಅಥವಾ "ನಾನು ಸಿಗರೇಟಿಗಾಗಿ ಕೊಲೆ ಮಾಡ ಬಲ್ಲೆ" ಎನ್ನುವಂತೆ ಒಂದು ರೀತಿಯ ಅತಿಶಯೋಕ್ತಿ ಎನಿಸುತ್ತದೆ. ಇಂತಹ ಸಮರ್ಥನೆಗಳನ್ನು ಪದಶಃ ತೆಗೆದು ಕೊಳ್ಳಬಾರದು. ನಿಷ್ಠುರವಾಗಿ ಹೇಳ ಬೇಕೆಂದರೆ ನಮ್ಮ ಅಭಿಮಾನಿ ಹೇಳುತ್ತಿದ್ದುದು ತಪ್ಪು.

ಆದ್ದರಿಂದ ಜ್ಞಾನಕ್ಕೆ ಕೇವಲ ನಂಬಿಕೆ ಸಾಲದು. ಜ್ಞಾನ ಒಬ್ಬನ ನಂಬಿಕೆ ದಿಟವಾಗಿರುವುದನ್ನು ಬಯಸುತ್ತದೆ. ಆದ್ದರಿಂದ ಈ ಕೆಳಗಿನ ದೃಷ್ಟಿ ಕೋನವನ್ನು ಪರಿಶೀಲಿಸೋಣ:

ಡಿ2. 'ಎಸ್' ಉ 'ಪಿ' ಪಿ ¼ ಡಿಎಫ್, ಎಂಬ ಜ್ಞಾನ ಹೊಂದಿದ್ದಾನೆ.

(1) 'ಎಸ'ಉ, 'ಪಿ'ಯನ್ನು ನಂಬುತ್ತಾನೆ ಮತ್ತು

(2) ಪಿ ಸತ್ಯವಾಗಿದೆ.

ಡಿ2 ಒಬ್ಬ 'ಪಿ' ಯ ಬಗೆಗೆ ಕೇವಲ ಸತ್ಯವಾದ ನಂಬಿಕೆ ಇದ್ದಾಗ ಮಾತ್ರ 'ಪಿ'ಯನ್ನು ತಿಳಿದಿರುತ್ತಾನೆ ಎಂದು ತಿಳಿಸುತ್ತದೆ. 'ಪಿ' ಯನ್ನು ತಿಳಿಯಲು 'ಪಿ'ಯ ಬಗೆಗಿನ ಸತ್ಯವಾದ ನಂಬಿಕೆ ಮಾತ್ರ ಸಾಕು ಎಂದು ಪ್ರತಿಪಾದಿಸುತ್ತದೆ. ಇದು ಕೂಡಾ ಸ್ಪಷ್ಟ ತಪ್ಪು ತಿಳಿವಳಿಕೆ. ಒಬ್ಬ ಜ್ಞಾನವಲ್ಲದ ನಿಜವಾದ ನಂಬಿಕೆ ಹೊಂದಿರಬಹುದು. ಅದೃಷ್ಟದ ಊಹೆಗಳು ಅಥವಾ ಬರಿಯ ಮುನ್ನೆಣಿಕೆಗಳು ಅಥವಾ ಅಂಧಶ್ರದ್ಧೆಗಳನ್ನು ಆಧರಿಸಿದ ನಂಬಿಕೆಗಳು ಜ್ಞಾನಕ್ಕೆ ಸಂಗತಿಗಳಲ್ಲ.

ಉದಾಹರಣೆಗೆ ಬೋನಿ ವಾರ್ತಾಪತ್ರಿಕೆಯಲ್ಲಿ ತನ್ನ ಜಾತಕ ಓದುತ್ತಾಳೆ. ಶೀಘ್ರದಲ್ಲೇ ಅವಳಿಗೆ ಹಣದ ಭಾಗ್ಯ ಕೂಡಿ ಬರುವುದು (ಅವಳು ಶೀಘ್ರವಾಗಿ ಹಣ ಪಡೆಯುತ್ತಾಳೆ) ಎಂದು ಅದು ಹೇಳುತ್ತದೆ. ಅವಳು ಅದನ್ನು ನಂಬಲು ಯಾವುದೇ ಆಧಾರಗಳು ಇರುವುದಿಲ್ಲ. ಆದರೂ ಅವಳು ಜಾತಕ ಹೇಳುವುದನ್ನು ನಂಬುತ್ತಾಳೆ. ಆ ದಿನ ನಂತರದಲ್ಲಿ ಅವಳು ತನ್ನ ಹಳೆಯ ಕೋಟಿನಲ್ಲಿ 50 ಡಾಲರ್ ಹಣವನ್ನು ನೋಡುತ್ತಾಳೆ. ಹಣ ಪಡೆಯುತ್ತೇನೆ ಎನ್ನುವ ಬೋನಿಯ ನಂಬಿಕೆ ನಿಜವಾಯಿತು ಆದರೆ ಅದು ಜ್ಞಾನವಲ್ಲ. ಅದೊಂದು ನಿರಾಧಾರವಾದ ನಂಬಿಕೆ.

ಅತ್ಯಂತ ನಿರಾಶಾವಾದಿಯಾದ ಮಾಲ್ಕೋಬನನ್ನು ಪರಿಗಣಿಸೋಣ. ಪ್ರತಿ ದಿನ ಮುಂಜಾನೆ ಆತ ತನಗೇನೋ ನಿಜವಾದ ಕೆಡುಕಾಗುತ್ತದೆ ಎಂದು ನಂಬುತ್ತಾನೆ.

(ಎನ್ನುವ ನಂಬಿಕೆ ರೂಪಿಸಿಕೊಳ್ಳುತ್ತಾನೆ.) ಪ್ರತಿದಿನ ಮುಂಜಾನೆ ಕಾರಣಗಳು ಅಥವಾ ಸಾಕ್ಷ್ಯಾ ಧಾರಗಳಿಲ್ಲದಿದ್ದರೂ ಅವನು ಇಂತಹ ನಂಬಿಕೆಗಳನ್ನು ರೂಪಿಸಿಕೊಳ್ಳುತ್ತಾನೆ. ಅವನ ನಂಬಿಕೆ ಸಾಮಾನ್ಯವಾಗಿ ಯಾವಾಗಲೂ ಸಟೆಯಾಗುತ್ತದೆ.ಒಂದು ಮಧ್ಯಾಹ್ನ ಒಂದು ಬಸ್ ಡಿಕ್ಕಿ ಹೊಡೆದು ಆತ ಸಾಯುತ್ತಾನೆ. ಆ ದಿನ ಬೆಳಿಗ್ಗೆ ಮಾಲ್ಕೋಂಬ್ ತನಗೇನೋ ಕೆಡುಕಾಗುತ್ತದೆ ಎಂದು ರೂಪಿಸಿ ಕೊಂಡಿದ್ದ ನಂಬಿಕೆ ಸತ್ಯವಾಗಿ ಹೊರ ಹೊಮ್ಮುತ್ತದೆ. ಆದರೆ ಮಾಲ್ಕೋಂಬ್ ತನಗೆ ಏನೋ ಕೆಡುಕಾಗುತ್ತದೆ ಎಂದು ಅರಿತಿದ್ದ ನಂಬಿಕೆ ಸಟೆ. ಅವನ ನಂಬಿಕೆ ಸತ್ಯವಾದರೂ ಜ್ಞಾನಕ್ಕೆ ಉದಾಹರಣೆಯಲ್ಲ. ಡಿ2 ಕೇವಲ ಸತ್ಯವಾದ ನಂಬಿಕೆಗಳು ಜ್ಞಾನವಾಗಲು ಸಾಕು ಎಂದು ತೆಗೆದುಕೊಳ್ಳುವುದರಿಂದ ಬೋನಿ ಮತ್ತು ಮಾಲ್ಕೋಂಬರಿಗೆ ಜ್ಞಾನವಿತ್ತು (ಎನ್ನುವ ಅರ್ಥ ಬರುತ್ತದೆ.) ಎಂದು ತಪ್ಪಾಗಿ ಅರ್ಥೈಸುತ್ತದೆ.

ಕೇವಲ ನಿಜ ನಂಬಿಕೆಗಳು ಜ್ಞಾನವಾಗಲು ಸಾಕಾಗದೇ ಹೋದರೆ ಜ್ಞಾನವಾಗಲು ಬೇರೇನು ಅಗತ್ಯ? 'ಎಸ್'ಉ 'ಪಿ'ಯನ್ನು ತಿಳಿದಿದ್ದಾನೆ ಎಂದಾಗಲು 'ಪಿ'ಯು 'ಎಸ್' ಗೆ ಜ್ಞಾನಾತ್ಮಕವಾಗಿ ಸಮರ್ಥಿಸಲ್ಪಟ್ಟಿರಬೇಕು ಅಥವಾ 'ಪಿ'ಯು 'ಎಸ್' ಗೆ ಸಕಾರಣಿಕವಾಗಿರಬೇಕು, ಎನ್ನುವುದು ಒಂದು ಸಾಂಪ್ರದಾಯಿಕ ಉತ್ತರ.

ಈ ಸಾಂಪ್ರದಾಯಿಕ ವಿವರಣೆಯನ್ನು ನಾವು ಹೀಗೆ ಸೂತ್ರೀಕರಿಸಬಹುದು.

ಡಿ3 'ಎಸ್'ಗೆ ಪಿ ¼ ಡಿಎಫ್.ನ ಜ್ಞಾನವಿದೆ

(1) 'ಎಸ್' ಗೆ 'ಪಿ'ಯಲ್ಲಿ ನಂಬಿಕೆಯಿದೆ. ,
(2) 'ಪಿ' ಯು ಸತ್ಯವಾಗಿದೆ ಮತ್ತು
(3) 'ಪಿ'ಯು 'ಎಸ್' ಗೆ ಜ್ಞಾನಾತ್ಮಕವಾಗಿ ಸಮರ್ಥಿಸಲ್ಪಟ್ಟಿದೆ.

ಡಿ3 ಪ್ರಕಾರ ಜ್ಞಾನಕ್ಕೆ ಸತ್ತಾತ್ಮಕವಾಗಿ ಸಮರ್ಥಿಸಲ್ಪಟ್ಟ ಸತ್ಯ ನಂಬಿಕೆಯ ಅಗತ್ಯವಿದೆ. ಆದ್ದರಿಂದಲೇ ಡಿ3 ಸಮರ್ಥಿತ ಸತ್ಯ ನಂಬಿಕೆಯ ಎಖಿಃ ಖಾತೆಯನ್ನು ಪ್ರತಿನಿಧಿಸುತ್ತದೆ.[1]

ಡಿ2 ವಿನಲ್ಲಿ ನಾವು ಬೋನಿಗೆ ಹಣ ದೊರೆಯುತ್ತದೆ ಎನ್ನುವ ಮತ್ತು ಮಾಲ್ಕೋಂಬನಿಗೆ ಆ ದಿನ ಏನೋ ಕೆಡುಕು ಸಂಭವಿಸುತ್ತದೆ ಎನ್ನುವ ಜ್ಞಾನವಿತ್ತು ಎನ್ನುವ ದೋಷವಾಗಿದೆ ಎಂದು ಅರಿತಿದ್ದೇವೆ. ಆದರೆ ಡಿ3 ಯಲ್ಲಿ ಈ ದೋಷಕ್ಕೆ ಅವಕಾಶಗಳಿಲ್ಲ. ಏಕೆ? ಎಂದು ತಿಳಿಯಲು ಬೋನಿಯ ಸಂಗತಿಯನ್ನು ಮತ್ತೊಮ್ಮೆ ತೆಗೆದು ಕೊಳ್ಳೋಣ. ಅವಳು ತನಗೆ ಹಣ ದೊರೆಯುತ್ತದೆ ಎಂದು ನಂಬಿದಳು. ವಾರ್ತಾಪತ್ರಿಕೆಯಲ್ಲಿ ಜಾತಕ ಓದಿದ್ದರಿಂದ ಅವಳು (ಹಾಗೆ ನಂಬಿದಳು ಅದು) ಹಾಗೆ ನಂಬಿದಳೆ ವಿನಹ ಅದರ ಹೊರತಾಗಿ ಹಾಗೆ ನಂಬಲು ಅವಳಿಗೆ ಯಾವುದೇ ಕಾರಣಗಳಿರಲಿಲ್ಲ. ಈ ಸಂದರ್ಭಗಳಲ್ಲಿ ಅವಳು ಹಣ ಪಡೆಯುವಳು ಎನ್ನುವ ಪ್ರಸ್ತಾಪ ಸಮರ್ಥಿತವಾಗಿರಲಿಲ್ಲ ಅಥವಾ ಅವಳಿಗೆ ಸಕಾರಣವಾಗಿರಲಿಲ್ಲ. ಬೋನಿಯ ನಂಬಿಕೆ , ಡಿ3 ನಲ್ಲಿರುವ ಸಮರ್ಥನಾ ನಿಯಮಗಳನ್ನು ಪೂರೈಸುವುದಿಲ್ಲ. ಆದ್ದರಿಂದ , ಡಿ3 ಬೋನಿ ಜ್ಞಾನಹೊಂದಿದ್ದಾಳೆ ಎಂದು ಧ್ವನಿಸುವುದಿಲ್ಲ. ಇದೇ ರೀತಿಯ ವಿವೇಚನೆ ಮಾಲ್ಕೋಂಬನ ಪ್ರಕರಣಕ್ಕೂ ಅನ್ವಯವಗುತ್ತದೆ. ಈ ದಿನ ತನಗೆ ಏನೋ ಕೆಡಕು ಉಂಟಾಗುತ್ತದೆ ಎನ್ನುವುದು ಅವನ ಪಾಲಿಗೆ ಸಮರ್ಥಿತವೂ ಆಗಿಲ್ಲ ಸಕಾರಣಿಕವೂ ಆಗಿಲ್ಲ. ಅವನು ತನ್ನ ಅತಿಶಯಿತ ನಿರಾಶಾವಾದದ ಆಧಾರದಲ್ಲಿ ಅದನ್ನು ಸರಳವಾಗಿ ಒಪ್ಪಿಕೊಂಡಿದ್ದಾನೆ.

ಆದುದರಿಂದ 'ಡಿ3' ಮಾಲ್ಕೋಂಬನು ತಿಳಿದಿದ್ದಾನೆ ಎಂದು ಸೂಚಿಸುವುದಿಲ್ಲ. ಈ ವಿಷಯದಲ್ಲಿ 'ಡಿ3'ಯು 'ಡಿ2' ವಿಗಿಂತ ಪ್ರಗತಿ ಸಾಧಿಸಿದೆ ಎನ್ನ ಬಹುದು.

'ಡಿ3' ಸರಿಯಾದ ಮಾರ್ಗದಲ್ಲಿದೆ ಎಂದು ತೋರುತ್ತದೆ. ಹಾಗಿದ್ದರೂ ಮುಂದಿನ ಅಧ್ಯಾಯದಲ್ಲಿ 'ಡಿ3' ಬಗೆಗೆ ಇರುವ ಕೆಲ ಗಂಭೀರ ಆಕ್ಷೇಪಣೆಗಳನ್ನು ಪರಿಗಣಿಸಿ ಹೆಚ್ಚಿನ ನಿಯಮಗಳನ್ನು ವಿಧಿಸುವ ಅಗತ್ಯದ ಬಗ್ಗೆ ಯೋಚಿಸೋಣ. ಈಗಲೂ ಕೂಡಾ ಇರುವಂತೆಯೇ 'ಡಿ3' ಸಾಕಾಗುವುದಿಲ್ಲ ಎಂದು ಸಾಮಾನ್ಯವಾಗಿ ಎಲ್ಲ ತತ್ತ್ವಶಾಸ್ತ್ರಜ್ಞರೂ ಒಪ್ಪಿ ಕೊಂಡರೂ ಅನೇಕರು ಜ್ಞಾನಕ್ಕೆ ಸತ್ತಾತ್ಮಕವಾಗಿ ಸಮರ್ಥಿತವಾದ ಸತ್ಯವಾದ ನಂಬಿಕೆಯ ಅಗತ್ಯವಿದೆ ಎಂದು ಒಪ್ಪಿ ಕೊಳ್ಳುತ್ತಾರೆ.

ಈ ಸಂದರ್ಭದಲ್ಲಿ ನಾವೊಮ್ಮೆ ಸಂಕ್ಷಿಪ್ತವಾಗಿ ಪ್ರಾತಿಪಾದಿಕ ಜ್ಞಾನದ (ಘಟಕಗಳನ್ನು) ಘಟಕಗಳೆಡೆ ನಮ್ಮ ಗಮನ ಹರಿಸೋಣ. (ಗಮನಿಸುವತ್ತ ತಿರುಗೋಣ.) ನಾವು ಜ್ಞಾನದ ಕುರಿತಾದ ಸಾಂಪ್ರದಾಯಿಕವಾದ (ನೋಟದ ಉತ್ತಮ ತರವಾದ ತಿಳುವಳಿಕೆ ಹೊಂದಬಹುದೆಂಬ) ದೃಷ್ಟಿಕೋನದ ಬಗ್ಗೆ ಹೆಚ್ಚು ತಿಳವಳಿಕೆ ಹೊಂದಬಹುದೆಂಬ ಭರವಸೆಯಿಂದ ನಾನು ಕೆಲ ಸಾಮಾನ್ಯ ಹೇಳಿಕೆಗಳನ್ನು ಮಾಡುತ್ತೇನೆ.

# ನಂಬಿಕೆಗಳು

ನಾವು ಯಾವಾಗ ನಂಬಿಕೆಗಳನ್ನು ಪರಿಗಣಿಸಿದರೂ ಅದರ ಬಗೆಗೆ ಮೂರು ವಿಭಿನ್ನ ಮನೋವೃತ್ತಿಗಳನ್ನು ಹೊಂದಬಹುದು. ಮೊದಲನೆಯದಾಗಿ ನಾವು ಅದನ್ನು ನಂಬ ಬಹುದು ಅಥವಾ ಸತ್ಯವೆಂದು ಅಂಗೀಕರಿಸ ಬಹುದು. ಎರಡನೆಯದಾಗಿ, ಡಿಸ್ ಬಿಲೀವ್ ಇಟ್ ಎಂದರೆ ಅದನ್ನು ಸಟೆ ಎಂದು ನಂಬಿ ಅಥವಾ ಅದರ ಇಲ್ಲದಿರುವಿಕೆಯನ್ನು ನಂಬಿ. ಇವುಗಳನ್ನು ನೋಡಿ. ಮೂರನೆಯದಾಗಿ ನಾವು ನಂಬಿಕೆಯನ್ನು ಅಮಾನತ್ತಿನಲ್ಲಿಡಬಹುದು ಅಥವ ತೂಗುಬಿಡಬಹುದು. ನಾವು ಈ ಮನೋಭಾವಗಳನ್ನು ದೇವರು ಅಸ್ತಿತ್ವದಲ್ಲಿದ್ದಾನೆ ಎನ್ನುವ ಪ್ರತಿಪಾದನೆಯ ಬಗ್ಗೆ ಆಸ್ತಿಕ, ನಾಸ್ತಿಕ, ಮತ್ತು ಅಜ್ಞಾತವಾದಿಗಳ ಮನೋಭಾವಗಳ ಬಗ್ಗೆ ವಿವೇಚಿಸುವ ಮೂಲಕ ವಿಶದೀಕರಿಸಬಹುದು. ಆಸ್ತಿಕ ಪ್ರತಿಪಾದನೆಯನ್ನು ಸ್ವೀಕರಿಸುತ್ತಾನೆ, ನಾಸ್ತಿಕ ನಿರಾಕರಿಸುತ್ತಾನೆ, ಅಜ್ಞಾತವಾದಿ ಅದನ್ನು ಅಮಾನತ್ತಿನಲ್ಲಿಡುತ್ತಾನೆ.

ಮೊದಲೇ ತಿಳಿಸಿದಂತೆ ನಾವು ನಂಬಿಕೆಯನ್ನು ಪ್ರಾತಿಪಾದಿಕ ಮನೋಭಾವವನ್ನಾಗಿ, ಎಂದರೆ ವ್ಯಕ್ತಿ ಮತ್ತು ಪ್ರತಿಪಾದನೆಯ ನಡುವಿನ ಸಂಬಂಧವಾಗಿ ಪರಿಕಲ್ಪಿಸಬಹುದು. ನಿಜವಾಗಿಯೂ ನಂಬಿಕೆಯ ಜೊತೆಗೆ ಅನೇಕ ಪ್ರಾತಿಪಾದಿಕ ಮನೋಭಾವಗಳಿವೆ. ಭರವಸೆ, ಭಯ, ಸಂಶಯ, ಆಸೆ ಇವು ಪ್ರತಿಪಾದನೆಯ ಜೊತೆಗೆ ಸಂಬಂಧಿಸುವ ಕೆಲ ಮಾರ್ಗಗಳು ಮಾತ್ರ. ಮಳೆ ಬರುತ್ತದೆ ಎನ್ನುವ ಪ್ರತಿಪಾದನೆಯನ್ನು ಗಮನಿಸೋಣ. ಮಳೆ ಬರುತ್ತದೆ ಎಂದು ನಂಬುವುದರ ಜೊತೆಗೆ ವ್ಯಕ್ತಿ ಮಳೆ ಬರುತ್ತದೆ ಎನ್ನುವ ಭರವಸೆ, ಭಯ, ಸಂಶಯ, ಅಥವಾ ಆಸೆಗಳನ್ನು ಪಡಬಹುದು.

ಒಂದು ಪ್ರತಿಪಾದನೆಯನ್ನು ನಂಬುವುದನ್ನು ಪ್ರತಿಪಾದನಾ ಮನೋಭಾವಗಳನ್ನು ಸ್ವೀಕರಿಸುವುದು ಮತ್ತು ಪರಿಗಣಿಸುವುದರಿಂದ ವಿಭಿನ್ನವಾಗಿರಿಸುವ ಅಗತ್ಯವಿದೆ. ಒಂದು ಪ್ರತಿಪಾದನೆಯನ್ನು ಸ್ವೀಕರಿಸುವುದು ಎಂದರೆ ಅದನ್ನು ಕೇವಲ 'ಮನಸ್ಸಿನಲ್ಲಿಟ್ಟುಕೊಳ್ಳುವುದು' ('ಮನಸ್ಸಿನೆದುರು ಇಟ್ಟುಕೊಳ್ಳುವುದು') ಮಾತ್ರ. ಒಂದು ಪ್ರತಿಪಾದನೆಯನ್ನು ಪರಿಗಣಿಸುವುದೆಂದರೆ ಅದನ್ನು ಸ್ವೀಕರಿಸಿ ಅಧ್ಯಯನ ಮಾಡುವುದು ಅಥವಾ ಪರೀಕ್ಷಿಸುವುದು. ವ್ಯಕ್ತಿ ಒಂದು ಪ್ರತಿಪಾದನೆಯನ್ನು ಸ್ವತಃ ನಂಬದೆಯೇ ಸ್ವೀಕರಿಸಿ, ಪರಿಗಣಿಸ ಬಹುದು. ಉದಾಹರಣೆಗೆ ನಾನು ಭೂಮಿ ಘನಾಕೃತಿಯಲ್ಲಿದೆ ಎನ್ನುವ ಪ್ರಸ್ತಾಪವನ್ನು ನಂಬದೆಯೇ ಸ್ವೀಕರಿಸಿ, ಪರಿಗಣಿಸಬಹುದು.ವ್ಯಕ್ತಿ ಯಾವುದನ್ನೋ ಸ್ವೀಕರಿಸಿ, ಪರಿಗಣಿಸದೇ ನಂಬಲೂಬಹುದು. ಈ ಮುಂಜಾನೆ ನಾನು ಭೂಮಿಯನ್ನು ಗುಂಡಾಗಿದೆ ಎಂದು ನಂಬಿದೆ. ಆದರೆ ನಾನು ಆ ಪ್ರತಿಪಾದನೆಯನ್ನು ಸ್ವೀಕರಿಸಲಿಲ್ಲ ಅಥವಾ ಪರಿಗಣಿಸಲೂ ಇಲ್ಲ.

ನಾವೆಲ್ಲರೂ ಸ್ವೀಕರಿಸದೇ ಅಥವಾ ಪರಿಗಣಿಸದೇ ಇರುವ ಅನೇಕ ಸಂಗತಿಗಳನ್ನು ನಾವು ನಂಬುತ್ತೇವೆ. ಈ ನಂಬಿಕೆಗಳು ಪ್ರವೃತ್ತಿಪರ ಅಥವಾ ಸ್ವಾಭಾವಿಕ ನಂಬಿಕೆಗಳು ಎಂದು ಕರೆಸಿಕೊಳ್ಳುತ್ತವೆ. ಈ ಮುಂಜಾನೆ ನಾನು ಭೂಮಿ ದುಂಡಗಿದೆ ಎಂದು ನಂಬಿದ್ದು ಸ್ವಾಭಾವಿಕ ನಂಬಿಕೆಯಾಗಿತ್ತು. ನಾವು ಪ್ರತಿಪಾದನೆಯನ್ನು ಸ್ವೀಕರಿಸಿ ನಂಬಿದರೆ ಅದನ್ನು ಸಂಭವಿತ ನಂಬಿಕೆ ಎಂದು ಹೇಳುತ್ತೇವೆ. ಈಗ ನಾನು ಭೂಮಿ ದುಂಡಗಿದೆ ಎನ್ನುವ ಪ್ರತಿಪಾದನೆಯನ್ನು ಸ್ವೀಕರಿಸಿ ನಂಬಿರುವುದರಿAದ ಭೂಮಿ ದುಂಡಗಿದೆ ಎನ್ನುವ ನನ್ನ ನಂಬಿಕೆ ಸಂಭವಿತ ನಂಬಿಕೆ.

ಸ್ವಾಭಾವಿಕ ನಂಬಿಕೆಯನ್ನು ಯಾವುದನ್ನಾದರೂ ನಂಬುವ ಸ್ವಭಾದಿಂದ ಭಿನ್ನವಾಗಿ ನೋಡ ಬೇಕಾದ ಅಗತ್ಯ ಇದೆ. ನಾವು ನಂಬದಿರುವ ಆದರೆ ಪರಿಗಣಿಸಿದಲ್ಲಿ ನಂಬ ಬಹುದಾದ ಅನೇಕ ಪ್ರತಿಪಾದನೆಗಳಿವೆ. 'ಯಾವುದೇ ಆನೆಯೂ ನರಶಾಸ್ತ್ರತಜ್ಞನಾಗಿಲ್ಲ' ಎನ್ನುವುದನ್ನು

ಒಬ್ಬ ಪರಿಗಣಿಸದಿರ ಬಹುದು ಮತ್ತು ನಂಬದೇ ಇರಬಹುದು. ಆತ ಆ ಪ್ರತಿಪಾದನೆಯನ್ನು ಪರಿಗಣಿಸಿದರೆ ಅದನ್ನು ನಂಬಲೂ ಬಹುದು. ಅವನಿಗೆ ಆ ಪ್ರತಿಪಾದನೆಯ ಬಗೆಗೆ ಸ್ವಾಭಾವಿಕ ನಂಬಿಕೆ ಇಲ್ಲದಿದ್ದರೂ, ಆತ ಆ ಪ್ರಸ್ತಾಪವನ್ನು ನಂಬುವ ಸ್ವಭಾವ ಹೊಂದಿರ ಬಹುದು.

ನಾವು ಈ ಸಂಕ್ಷಿಪ್ತ ಚರ್ಚೆಯನ್ನು ಎರಡು ವಿಷಯಗಳನ್ನು ಮಂಡಿಸುವುದರ ಮೂಲಕ ಮುಗಿಸೋಣ. ಸಾಂಪ್ರದಾಯಿಕ **JTB** (ಸಮರ್ಥಿತ ಸತ್ಯವಾದ ನಂಬಿಕೆ) ಖಾತೆಯ ಪ್ರಕಾರ ಒಬ್ಬ 'ಪಿ'ಯ ಜ್ಞಾನವನ್ನು ಹೊಂದ ಬೇಕಾದರೆ ಆತ ಆ 'ಪಿ' ಯನ್ನು ನಂಬಿರಬೇಕು. ನಾವು ಜ್ಞಾನ ಸಂಭವಿತ ನಂಬಿಕೆ ಅಥವಾ ಸ್ವಾಭಾವಿಕ ನಂಬಿಕೆಯನ್ನು ಬಯಸುತ್ತದೆ ಎಂದು ಹೇಳ ಬಹುದು. ಹೀಗೆ, ನಾವು, 'ನಾನು ಇಂದು ಮುಂಜಾನೆ ಭೂಮಿ ದುಂಡಗಿದೆ ಎನ್ನುವ ಪ್ರತಿಪಾದನೆಯನ್ನು ನಂಬಿದ್ದೆ'

ಆದರೆ ಆ ನಂಬಿಕೆ ಕೇವಲ ಸ್ವಾಭಾವಿಕ ನಂಬಿಕೆಯಾಗಿತ್ತು ಎಂದೆನ್ನಬಹುದು. ಎರಡನೆಯದಾಗಿ ನಂಬಿಕೆ, ಪೂರ್ಣ ಮತ್ತು ದೃಢವಾದ ವಿಶ್ವಾಸದಿಂದ ತಾತ್ಕಾಲಿಕ ಮತ್ತು ಜಾಗರೂಕತೆಯಿಂದ ಒಪ್ಪಿಕೊಂಡ ಗಡಿಗಳೊಳಗೆ ತನ್ನ ತೀವ್ರತೆ ಮತ್ತು ಬಲದಲ್ಲಿ ಹರಡಿಕೊಂಡಿರುತ್ತದೆ. ಹೀಗೆ ಒಬ್ಬನು ದೇವರಿದ್ದಾನೆ ಎಂದು ಖಚಿತವಾಗಿ ಮತ್ತು ಬಲವಾಗಿ ನಂಬಿರ ಬಹುದು, ಇನ್ನೊಬ್ಬ ಅದನ್ನು ಸ್ವಲ್ಪ ದುರ್ಬಲ ಮಟ್ಟದ ತೀವ್ರತೆಯಲ್ಲಿ ನಂಬಿರ ಬಹುದು. ಈಗ ಜ್ಞಾನ ನಂಬಿಕೆಯನ್ನು ಬಯಸುವುದಾದರೆ ಮತ್ತು ನಂಬಿಕೆ ತೀವ್ರತೆಯ ಮಟ್ಟಗಳಲ್ಲಿ ವ್ಯತ್ಯಾಸ ಹೊಂದುವುದಾದರೆ, ಜ್ಞಾನ ನಂಬಿಕೆಯ ತೀವ್ರತೆಯ ಯಾವುದೋ ಒಂದು ಮಟ್ಟದ ಅಗತ್ಯವಿದೆಯೇ? ಸಾಂಪ್ರದಾಯಿಕವಾಗಿ ಜ್ಞಾನ ಕೇವಲ ಸಮರ್ಥಿತ ಸತ್ಯವಾದ ನಂಬಿಕೆಯನ್ನು ಬಯಸುತ್ತದೆ. ಎಲ್ಲಿಯ ವರೆಗೆ ಒಬ್ಬ ಇದನ್ನು ನಂಬುತ್ತಾನೋ ಅಲ್ಲಿಯ ವರೆಗೆ ಬೇರೆ ನಿಯಮಗಳ ಪೂರೈಕೆಯ ಜೊತೆಗೆ ಒಬ್ಬನ ನಂಬಿಕೆಯ ತೀವ್ರತೆಯ ಮಟ್ಟ ಎಷ್ಟೇ ಆಗಿದ್ದರು ಅವನಿಗೆ 'ಪಿ' ಯ ಜ್ಞಾನವಿದೆ ಎಂದು ಭಾವಿಸಬೇಕಾಗುತ್ತದೆ.

## ಸತ್ಯ

ಒಂದು ಪ್ರತಿಪಾದನೆ ಅಥವಾ ನಂಬಿಕೆಯನ್ನು ಸರಿ ಅಥವಾ ತಪ್ಪು ಎಂದು ನಿರ್ಧರಿಸುವ ಸತ್ಯದ ಸ್ವಭಾವದ ಬಗೆಗೆ ಅನೇಕ ಸಿದ್ಧಾಂತಗಳಿವೆ. ಸತ್ಯದ ಅನುರೂಪ ಸಿದ್ಧಾಂತ ಪ್ರಾಯಶಃ ಅತ್ಯಂತ ಹಳೆಯದಾದ ಮತ್ತು ವ್ಯಾಪಕವಾಗಿ ಎತ್ತಿ ಹಿಡಿಯಲ್ಪಟ್ಟುರುವ ಸಿದ್ಧಾಂತ. ಅನುರೂಪ ಸಿದ್ಧಾಂತ ಪ್ರಮುಖವಾಗಿ ಎರಡು ಸಮರ್ಥನೆಗಳನ್ನು ಮಾಡುತ್ತದೆ. ಮೊದಲನೆಯದಾಗಿ ಕೇವಲ ತತ್ಯಗಳಿಗೆ (ಮಾಹಿತಿಗಳಿಗೆ) ಅನುರೂಪವಾಗಿದ್ದಾಗ ಮಾತ್ರ ಒಂದು ಪ್ರತಿಪಾದನೆ ಸತ್ಯವಾಗಿರುತ್ತದೆ. ಎರಡನೆಯದಾಗಿ ಕೇವಲ ತತ್ಯಗಳಿಗೆ ಅನುರೂಪವಾಗಿರಲು ಅಸಫಲವಾದಾಗ ಮಾತ್ರ ಪ್ರತಿಪಾದನೆ ತಪ್ಪಾಗಿರುತ್ತದೆ. ಅನುರೂಪ ಸಿದ್ಧಾಂತದ ಪರ ವಾದಿಸುವವರು ಹಲಬಾರಿ, ಒಂದು ಪ್ರತಿಪಾದನೆಯ ಸತ್ಯ, ತತ್ಯಗಳು ಅಥವಾ ಜಗತ್ತು ಹೇಗಿದೆಯೋ ಆ ದಾರಿಯ ಮೇಲೆ ಅವಲಂಬಿತವಾಗಿದೆ ಎನ್ನುವ, ಮೂರನೆಯ ವಾದವನ್ನು ಮಂಡಿಸುತ್ತಾರೆ. ಅರಿಸ್ಟಾಟಲ್ ಈ ದೃಷ್ಟಿಕೋನವನ್ನು ಸೂಚಿಸುತ್ತಾನೆ. ಅವನು "ನಾವು ನೀನು ಬಿಳಚಿಕೊಂಡಿದ್ದಿ ಎಂದು ಯೋಚಿಸುವುದರಿಂದ ನೀನು ಬಿಳಚಿ ಕೊಂಡಿಲ್ಲ; ಆದರೆ ನೀನು ಬಿಳಚಿ ಕೊಂಡಿರುವ್ಯದರಿಂದ, ನೀನು ಬಿಳಚಿ ಕೊಂಡಿದ್ದಿ ಎನ್ನುವ ನಮ್ಮಲ್ಲಿ ಸತ್ಯವಿದೆ 2. ನೀನು ಬಿಳಚಿದ್ದಿ ಎನ್ನುವ ಪ್ರತಿಪಾದನೆ ನೀನು ಬಿಳಚಿದ್ದರಿಂದ ಸತ್ಯ. ." ಎಂದು ಬರೆದ. ನೀನು ಬಿಳಚಿದ್ದಿ ಎನ್ನುವ ಪ್ರತಿಪಾದನೆ ನೀನು ಬಿಳಚಿಕೊಂಡಿದ್ದಿ ಎನ್ನುವ ತತ್ಯದ ಸದ್ಗುಣದಿಂದ ಅಥವಾ ಕಾರಣದಿಂದ ಸತ್ಯ.

ಸತ್ಯದ ಅನುರೂಪ ಸಿದ್ಧಾಂತದ ಪ್ರಕಾರ ಅದರ ಕುರಿತಾದ ನಮ್ಮ ನಂಬುವ ಕಾರಣದಿಂದ ಒಂದು ಪ್ರತಿಪಾದನೆ ಸತ್ಯವಾಗುವುದಿಲ್ಲ. ಉದಾಹರಣೆಗೆ, ಯಾರೋ ಒಬ್ಬ

ಬಿಳಚಿದ್ದಾನೆ ಎನ್ನುವ ಪ್ರತಿಪಾದನೆ ನಾವು ಅದನ್ನು ನಂಬುವುದು ಅಥವಾ ಅದನ್ನು ಕುರಿತು ನಂಬುವುದನ್ನು ಅವಲಂಬಿಸುವುದಿಲ್ಲ. ಒಬ್ಬ ಬಿಳಚಿ ಕೊಂಡಿದ್ದರೆ ಮಾತ್ರ ಆ ಪ್ರತಿಪಾದನೆ ಸತ್ಯವಾಗುತ್ತದೆ. ಅರಿಸ್ಟಾಟಲ್ ಸೂಚಿಸುವಂತೆ ಒಬ್ಬ ಬಿಳಚಿ ಕೊಂಡಿದ್ದಾನೆ ಎನ್ನುವ ತತ್ಯದ ಆಧಾರದ ಮೇಲೆ ಪ್ರತಿಪಾದನೆ ಸತ್ಯವಾಗುತ್ತದೆ.

ಮಿಗಿಲಾಗಿ ಅನುರೂಪ ಸಿದ್ಧಾಂತದ ಪ್ರಕಾರ ಒಂದೇ ಪ್ರತಿಪಾದನೆ ಸರಿ ಮತ್ತು ತಪ್ಪು ಎರಡೂ ಆಗಿರಲು ಸಾಧ್ಯವಿಲ್ಲ. ನೀನು ಬಿಳಚಿ ಕೊಂಡಿದ್ದಿ ಎನ್ನುವ ಪ್ರತಿಪಾದನೆ ಸರಿ ಮತ್ತು ತಪ್ಪು ಎರಡೂ ಆಗಿರಲು ಸಾಧ್ಯವಿಲ್ಲ. ಪ್ರತಿಪಾದನೆ ನಿನಗೆ ಸತ್ಯವಾಗಿ ನನಗೆ ಅಸತ್ಯವಾಗಲೂ ಸಾಧ್ಯವಿಲ್ಲ.

ಸತ್ಯ ಈ ರೀತಿಯಲ್ಲಿ ಸಾಪೇಕ್ಷವಲ್ಲ. ಸಹಜವಾಗಿ ನಾನು ತಿರಸ್ಕರಿಸಿದ ಯಾವುದೋ ಪ್ರತಿಪಾದನೆಯನ್ನು ನೀವು ನಂಬ ಬಹುದು. ಹೀಗೆ ನಾವು ಯಾವುದೋ ಪ್ರತಿಪಾದನೆಯ ಬಗೆಗೆ ಒಡಂಬಡದಿರಬಹುದು. ಇಷ್ಟಾದರೂ ಪ್ರತಿಪಾದನೆಯ ಸತ್ಯ ತತ್ಯಗಳಿಂದ ನಿರ್ಧಾರವಾಗುತ್ತದೆಯೇ ಹೊರತು ನಾನು ಅಥವಾ ನೀವು ನಂಬುತ್ತೇವೆ ಎನ್ನುವುದರ ಮೇಲಲ್ಲ. ಪುನಃ, ಯಾವುದೋ ಸಂಸ್ಕೃತಿ ಭೂಮಿ ಅನಂತವಾದ ಸಾಗರದಲ್ಲಿ ತೇಲುವ ಒಂದು ಮುದ್ರಿಕೆ ಎಂದು ನಂಬಿತ್ತು ಎಂದಿಟ್ಟು ಕೊಳ್ಳೋಣ. ನಾವು ಈ ಪ್ರತಿಪಾದನೆ ಅವರ ಪಾಲಿಗೆ ಸತ್ಯವಾಗಿತ್ತು ಎಂದು ಹೇಳೋಣವೇ? (ಅನುರೂಪ ಸಿದ್ಧಾಂತದ ಪ್ರಕಾರ ಉತ್ತರ "ಇಲ್ಲ" ಎಂದು.) ಅನುರೂಪ ಸಿದ್ಧಾಂತವು 'ಇಲ್ಲ' ವೆಂದು ಹೇಳುತ್ತದೆ

ಅವರು ಪ್ರತಿಪಾದನೆಯನ್ನು ಸ್ವೀಕರಿಸಿದರು. ಅದನ್ನು ಸತ್ಯ ಎಂದು ನಂಬಿದರು. ಅವರು ನಂಬಿದ ಪ್ರತಿಪಾದನೆ ತಪ್ಪಾಗಿತ್ತು. ಅದು ತತ್ಯಗಳಿಗೆ ಅನುರೂಪವಾಗಿರಲಿಲ್ಲ.

ಆದರೂ ನಾವು ಈ ಕೆಳಗಿನ ಆಕ್ಷೇಪಣೆಯನ್ನು ಗಮನಿಸೋಣ. ಜಿಮ್ ಲಂಡನ್ನಿನ್ನಲ್ಲಿದ್ದಾನೆ ಮತ್ತು ನ್ಯೂಯಾರ್ಕಿನಲ್ಲಿರುವ ತನ್ನ ತಮ್ಮ ಟಾಮನ ಜೊತೆ ಮಾತನ್ನಾಡುತ್ತಿದ್ದಾನೆ ಎಂದು ಭಾವಿಸೋಣ. ಜಿಮ್ ಕಿಟಕಿಯ ಹೊರಗೆ ಮಳೆ ಬೀಳುತ್ತಿರುವುದನ್ನು ನೋಡುತ್ತಾನೆ ಮತ್ತು "ಮಳೆ ಆಗುತ್ತಿದೆ" ಎಂದು ಹೇಳುತ್ತಾನೆ. ಟಾಮನೂ ಕಿಟಕಿಯ ಹೊರಗೆ ಸೂರ್ಯ ಬೆಳಗುವುದನ್ನು ನೋಡುತ್ತಾನೆ ಮತ್ತು "ಮಳೆ ಆಗುತ್ತಿಲ್ಲ" ಎಂದು ಹೇಳುತ್ತಾನೆ. ಇಬ್ಬರೂ ಸರಿಯಾಗಿರಲು ಸಾಧ್ಯವೇ? ಇದು ಪ್ರತಿಪಾದನೆಯೊಂದು ಸರಿ ಮತ್ತು ತಪ್ಪು ಎರಡೂ ಆಗಿರುವ ಸಂಗತಿಯಲ್ಲವೇ? ಸಹಜವಾಗಿಯೇ ಇಬ್ಬರೂ ಸರಿಯಾಗಿರಲು ಸಾಧ್ಯ. ಪ್ರಕರಣದ ವಿವರ ಪರಿಶೀಲಿಸಿದಾಗ ಒಬ್ಬೊಬ್ಬರೂ ಸರಿಯಾಗಿದ್ದಾರೆ. ಆದರೆ ಇದು ಒಂದೇ ಪ್ರತಿಪಾದನೆ ಸರಿ ಮತ್ತು ತಪ್ಪು ಎರಡೂ ಆಗಿದೆ ಎಂದು ತೋರಿಸುವುದಿಲ್ಲ. ಜಿಮ್ ಲಂಡನ್ನಿನಲ್ಲಿ ಮಳೆಯಾಗುತ್ತಿದೆ ಎನ್ನುವ ಪ್ರತಿಪಾದನೆಯನ್ನು, ಟಾಮ್ ನ್ಯೂಯಾರ್ಕಿನಲ್ಲಿ ಮಳೆಯಾಗುತ್ತಿಲ್ಲ ಎನ್ನುವ ಪ್ರತಿಪಾದನೆಯನ್ನು ಸ್ವೀಕರಿಸಿದ್ದಾರೆ ಎಂದು ನಾವು ಹೇಳುತ್ತೇವೆ. ಇಬ್ಬರೂ ಸತ್ಯವಾದ ಪ್ರತಿಪಾದನೆಗಳನ್ನೇ ಅಂಗೀಕರಿಸಿದ್ದಾರೆ. ಆದರೆ ಅವರು ಒಂದೇ ಪ್ರತಿಪಾದನೆಯನ್ನು ಒಪ್ಪಿಕೊಂಡಿರುವುದಿಲ್ಲ.

ಸತ್ಯದ ಅನುರೂಪ ಸಿದ್ಧಾಂತ ಪುರಾತನ ಮತ್ತು ವ್ಯಾಪಕ. ಹಾಗಾದರೂ ಸಿದ್ಧಾಂತಕ್ಕೆ ಅನೇಕ ಆಕ್ಷೇಪಣೆಗಳೇನೋ ಇವೆ. ಕೆಲವರು, ಒಂದು ಪ್ರತಿಪಾದನೆ ತತ್ಯಗಳು ಅಥವಾ ಮಾಹಿತಿಗಳ ಜೊತೆಗೆ ಅನುರೂಪವಾಗಿರುವುದು ಎನ್ನುವುದಕ್ಕೆ ಸಾಕಷ್ಟು ವಿವರಣೆ ಇರ ಬೇಕು. ಸಿದ್ಧಾಂತ ಮಾಹಿತಿಪೂರ್ಣವಾಗಿಲ್ಲ ಎಂದು ಆಕ್ಷೇಪಿಸುತ್ತಾರೆ. ಇತರರು ತತ್ಯದ ಪರಿಕಲ್ಪನೆಯೇ ಸಂದಿಗ್ಧವಾಗಿರುವುದರಿಂದ ಈ ಸಿದ್ಧಾಂತ ಮಾಹಿತಿರಹಿತವಾಗಿದೆ ಎಂದು ಆಕ್ಷೇಪಿಸುತ್ತಾರೆ. ಇನ್ನು ಕೆಲವರು ಸತ್ಯ ಅಸತ್ಯಗಳ ಪರಿಕಲ್ಪನೆಗಳನ್ನು ಬಳಸದೇ ತತ್ಯವನ್ನು ವಿವರಿಸುವುದು ಅಸಾಧ್ಯ. ಆದುದರಿಂದ ಅನುರೂಪ ಸಿದ್ಧಾಂತ ವ್ಯರ್ಥೀಯ ಮತ್ತು ಅಂತಿಮದಲ್ಲಿ ಪ್ರಕಾಶ ರಹಿತ ಎಂದೆನ್ನುತ್ತಾರೆ.

ಇವು ಪ್ರಮುಖ ಟೀಕೆಗಳು. ಈ ಆಕ್ಷೇಪಣೆಗಳನ್ನು ಸಮಂಜಸವಾಗಿ ಪರಿಗಣಿಸುವುದು ದುರದೃಷ್ಟವಶಾತ್ ನಮ್ಮನ್ನು ಕ್ಷೇತ್ರದಿಂದ ದೂರ ಕೊಂಡೊಯ್ಯುತ್ತದೆ. ಹಾಗಾದರೂ ಸತ್ಯ, ತತ್ಯಗಳ ಮೇಲೆ ಆಧಾರಿತವಾದ ಪ್ರತಿಪಾದನೆ ಎನ್ನುವ ಮೂಲ ಒಳಅರಿವು ಟೀಕೆಗಳಿಗೆ ಹರಮಾರಿತನದ ಪ್ರತಿಭಟನೆ ಸಾಧಿಸಿದೆ. ಈ ಪುಸ್ತಕದ ಉದ್ದಕ್ಕೂ ನಾನು ಅನುರೂಪ ಸಿದ್ಧಾಂತದ ಯಾವುದೋ ಒಂದು ಆವೃತ್ತಿ ಸರಿಯಾಗಿದೆ ಎಂದು ಭಾವಿಸಿರುತ್ತೇನೆ. ಸತ್ಯದ ಬಗೆಗೆ ಬೇರೆ ಸಿದ್ಧಾಂತಳೂ ಇವೆ ಎನ್ನುವುದು ಗಮನಾರ್ಹ. ಅವುಗಳಲ್ಲಿ ಎರಡನ್ನು ನಾವು ಸಂಕ್ಷಿಪ್ತವಾಗಿ ಗಮನಿಸೋಣ.

ಅನುರೂಪ ಸಿದ್ಧಾಂತಕ್ಕಿರುವ ಒಂದು ಪರ್ಯಾಯ ಸತ್ಯದ ಪ್ರಾಯೋಗಿಕ ಸಿದ್ಧಾಂತ. ಪ್ರಾಯೋಗಿಕ ಸಿದ್ಧಾಂತದ ಕೇಂದ್ರೀಯ ಅಂತರ್ದೃಷ್ಟಿ ಸತ್ಯವಾದ ನಂಬಿಕೆಗಳು ಸಾಮಾನ್ಯವಾಗಿ ಉಪಯುಕ್ತ ಮತ್ತು ತಪ್ಪು ನಂಬಿಕೆಗಳು ಉಪಯುಕ್ತವಲ್ಲ ಎಂಬುದಾಗಿದೆ. ಒಬ್ಬ ವೈದ್ಯ ರೋಗಿಯನ್ನು ಗುಣ ಪಡಿಸಬೇಕಾದರೆ ಅವನಿಗೆ ಯಾವುದು ರೋಗಿಯನ್ನು ಗುಣ ಪಡಿಸುತ್ತದೆ ಎನ್ನುವ ಸತ್ಯವಾದ ನಂಬಿಕೆಗಳು ಉಪಯುಕ್ತ. ಒಬ್ಬ ಬೋಸ್ಟನ್ನಿಗೆ ಹೋಗ ಬೇಕಾದರೆ ಯಾವ ದಾರಿಗಳು ಸಾಮಾನ್ಯವಾಗಿ ಬೋಸ್ಟನ್ನಿಗೆ ಹೋಗುತ್ತವೆ ಎನ್ನುವ ಸತ್ಯ ನಂಬಿಕೆಗಳು ತಪ್ಪಾದ ನಂಬಿಕೆಗಳಿಗಿಂತ ಹೆಚ್ಚು ಪ್ರಯೋಜನಕರ. ಈ ಸಂಪರ್ಕವನ್ನು ಗಮನಿಸಿದ ಪ್ರಾಯೋಗಿಕ ಸಿದ್ಧಾಂತ "ಯಾವುದನ್ನು ನಂಬುವುದು ಅಥವಾ ಅದರ ಮೇಲೆ ಕ್ರಿಯಾಶೀಲರಾಗುವುದು (ದೂರದಲ್ಲಿಯಾದರೂ) ಪ್ರಯೋಜನ ಕಾರಿಯಾಗುತ್ತದೆಯೋ ಅದು ಮಾತ್ರ ಸತ್ಯ" ಎಂದು ತಿಳಿಸುತ್ತದೆ.ಸ್ಥೂಲವಾಗಿ ಒಂದು ನಂಬಿಕೆ ಉಪಯುಕ್ತ ಅಥವಾ ಯಥೋಚಿತವಾಗಿದ್ದರೆ ಮಾತ್ರ ಅದು ಸತ್ಯ. ಅಮೇರಿಕಾದ ಶ್ರೇಷ್ಠ ಪ್ರಯೋಗವಾದಿ ವಿಲಿಯಂ ಜೇಮ್ಸ್ "ಸಾಮಾನ್ಯವಾಗಿ ಎಲ್ಲ ವೈಖರಿಗಳಲ್ಲೂ ಯಥೋಚಿತವಾಗಿದ್ದು, ದೀರ್ಘ ದೂರದೋಟ ಅಥವಾ ಪೂರ್ಣ ಪಥದಲ್ಲಿ ಯಥೋಚಿತವಾಗಿದ್ದು, ನಮ್ಮ ವರ್ತನೆಗೆ ಯಥೋಚಿತವಾದದ್ದು ಮಾತ್ರ ಸತ್ಯವಾಗಿರುತ್ತದೆ" ಎಂದು ಉಲ್ಲೇಖಿಸಿದ

ಸಾಮಾನ್ಯವಾಗಿ ಸತ್ಯವಾದ ನಂಬಿಕೆಗಳು ಒಳ್ಳೆಯ ಕ್ರಿಯೆಗಳಿಗೆ ಆಧಾರ ಒದಗಿಸುತ್ತವೆ ಮತ್ತು ಅವು ಸಾಮಾನ್ಯವಾಗಿ ಪ್ರಯೋಜನಕಾರಿಯಾಗಿರುತ್ತವೆ. ತಪ್ಪು ನಂಬಿಕೆಗಳು ಸಾಮಾನ್ಯವಾಗಿ ಕ್ರಿಯೆಗಳಿಗೆ ಕೆಟ್ಟ ಆಧಾರವನ್ನು ಒದಗಿಸುತ್ತವೆ ಎಂದು ಭಾವಿಸೋಣ. ಪ್ರಯೋಗವಾದ ಸಿದ್ಧಾಂತದ ವಿಮರ್ಶಕರು ಹಾಗೆಯೇ ಆಗಿದ್ದರು ಸತ್ಯವಾದ ನಂಬಿಕೆಯನ್ನು ಉಪಯುಕ್ತ ನಂಬಿಕೆಯ ಜೊತೆ ಗುರುತಿಸುವ ಅಗತ್ಯವೇನೂ ಇಲ್ಲ ಎಂದು ಟಿಪ್ಪಣಿ ಮಾಡುತ್ತಾರೆ. ಕೆಲಬಾರಿ ಸತ್ಯವಾದ ನಂಬಿಕೆ ಕೆಟ್ಟ ಪರಿಣಾಮವನ್ನು ಮತ್ತು ತಪ್ಪಾದ ನಂಬಿಕೆ ಒಳ್ಳೆಯ ಪರಿಣಾಮವನ್ನು ಹೊಂದಿರಬಹುದು. ಉದಾಹರಣೆಗೆ ;

(7) ಟಾಮನು ವೃದ್ಧಾಪ್ಯದಲ್ಲಿ ದೀರ್ಘ ಕಾಲೀನ ನೋವು ತುಂಬಿದ ರೋಗದಿಂದ ಮರಣ ಹೊಂದುತ್ತಾನೆ.

ಈ ಕೆಳಗಿನ ಪ್ರತಿಪಾದನೆ ಸತ್ಯವಾಗಿದೆ ಎಂದು ಭಾವಿಸಿದರೆ, ಊಹೆಯನ್ನು ಮುಂದುವರೆಸಿ ಟಾಮನು ಇದನ್ನು ನಂಬಿದರೆ ಅವನು ಸಾಕಷ್ಟು ತಳಮಳಕ್ಕೊಳಗಾಗುತ್ತಾನೆ. ಅವನು ಬದುಕಿನಲ್ಲಿ ಈಗ ಕಾಣುತ್ತಿರುವ ಸುಖ ಸಾಕಷ್ಟು ಕ್ಷೀಣಿಸುತ್ತದೆ. ಅವನು ತನ್ನ ವೇದನಾಪೂರ್ಣ ಸಾವಿನ ದೃಶ್ಯಗಳಿಂದ ಸದಾ ಕಾಡಲ್ಪಡುತ್ತಾನೆ. ಈಗ ಟಾಮನು (7) ನ್ನು ನಂಬುವುದು ಪ್ರಯೋಜನಕಾರಿಯಲ್ಲ. ಆದರೂ (7) ಸತ್ಯವಾಗಿರುವುದರಿಂದ ನಾವು ಒಂದು ಪ್ರತಿಪಾದನೆ ಕೇವಲ ಅದನ್ನು ನಂಬುವುದರಿAದ ಅಥವಾ ಅದರ ಮೇಲೆ ಕ್ರಿಯೆಯೆಸಗುವುದರಿಂದ ಉಪಯುಕ್ತವಾದಲ್ಲಿ ಮಾತ್ರ ಅದು ಸತ್ಯ ಎನ್ನುವ ದೃಷ್ಟಿಯನ್ನು ತಿರಸ್ಕರಿಸಬೇಕಾಗುತ್ತದೆ. ಇದೇ ರೀತಿಯಲ್ಲಿ ನಂಬಲು ಮತ್ತು ವರ್ತಿಸಲು ಪ್ರಯೋಜನಕಾರಿಯಾದ ತಪ್ಪು ಪ್ರತಿಪಾದನೆಗಳೂ ಇರಬಹುದು. ಉದಾಹರಣೆಗೆ ಟಾಮನು

ತನ್ನ ವೃದ್ಧಾಪ್ಯದಲ್ಲಿ ವೇದನಾಪೂರ್ಣವಾದ ಮರಣಾಂತಿಕ ರೋಗದಿಂದ ಬಳಲುತ್ತಿರುವಾಗಲೂ,

(8) ಆಸ್ಪತ್ರೆಯಲ್ಲಿರುವ ಇತರ ರೋಗಿಗಳು ತನಗಿಂತ ಹೆಚ್ಚು ಬಳಲುತ್ತಿದ್ದಾರೆ ಮತ್ತು ಧೈರ್ಯದಿಂದಿದ್ದಾರೆ ಎಂದು ತನ್ನನ್ನೇ ತಾನು ಸಮಾಧಾನ ಗೊಳಿಸಿ ಕೊಂಡರೆ,

ಆಗ (8) ನಂಬುವುದು ಟಾಮನು ಧೈರ್ಯವಾಗಿ ಸಮಾಧಾನವಾಗಿ ಪರಿಸ್ಥಿತಿ ಎದುರಿಸಲು ಪ್ರಯೋಜನವಾಗುತ್ತದೆ. ಬೇರೆಯವರು ತನಗಿಂತ ಹೆಚ್ಚಾದ ಬಳಲಿಕೆಯನ್ನು ಧೈರ್ಯವಾಗಿ ಎದುರಿಸುತ್ತಿರುವಾಗ ತಾನೂ ಹಾಗೇ ಮಾಡ ಬಹುದೆಂದು ಆಲೋಚಿಸುತ್ತಾನೆ. (8) ನ್ನು ನಂಬುವುದು ಟಾಮನಿಗೆ ಪ್ರಯೋಜನಕಾರಿಯಾಗಿದೆ. ಒಂದೊಮ್ಮೆ (8) ಅಸತ್ಯವೆಂದು ಭಾವಿಸೋಣ. ಆಸ್ಪತ್ರೆಯಲ್ಲಿರುವ ಯಾರೂ ಟಾಮನಿಗಿಂತ ಕೆಟ್ಟದಾಗಿ ಬಳಲುತ್ತಿಲ್ಲ ಎಂದಾದರೆ, ನಂಬಲು ಪ್ರಯೋಜನಕಾರಿಯಾಗಿರುವುದು ಯಾವಾಗಲೂ ಸತ್ಯವಾಗ ಬೇಕಾಗಿಲ್ಲ ಮತ್ತು ಸತ್ಯವಾಗಿರುವುದು ನಂಬಲು ಯಾವಾಗಲೂ ಪ್ರಯೋಜನಕಾರಿಯಾಗಿರಬೇಕಾಗಿಲ್ಲ.

ಸುಸಂಬದ್ಧತೆಯ ಸಿದ್ಧಾಂತ ಸತ್ಯವನ್ನು ಕುರಿತಾದ ಮತ್ತೊಂದು ಸಿದ್ಧಾಂತ. ಸುಸಂಬದ್ಧತೆಯ ಪರಿಕಲ್ಪನೆಯೇ ಸಿದ್ಧಾಂತಕ್ಕೆ ಕೇಂದ್ರೀಯವಾಗಿರುವುದರಲ್ಲಿ ಆಶ್ಚರ್ಯವೇನಿಲ್ಲ. ಸುಸಂಬದ್ಧತೆ ಅಥವಾ ಸುಸಂಗತಿಯ ಬಗ್ಗೆ ನಾವು 4ನೆಯ ಅಧ್ಯಾಯದಲ್ಲಿ ಹೆಚ್ಚು ತಿಳಿಸುತ್ತೇವೆ. ಸಧ್ಯಕ್ಕೆ ಪರಿಕಲ್ಪನೆಯನ್ನು ವಿಶದೀಕರಿಸಲು ಕೆಳಗಿನ ಉದಾಹರಣೆಯನ್ನು ಗಮನಿಸೋಣ. ನಾನು ಈ ಪ್ರತಿಪಾದನೆಗಳನ್ನು ನಂಬುತ್ತೇನೆ ಎಂದು ಭಾವಿಸೋಣ. :

(i) ನನಗೆ ನನ್ನ ಕೈಯಲ್ಲಿರುವ ಯಾವುದೋ ಬಿಳಿ ವಸ್ತುವಿನ ಇಂದ್ರಿಯಾನುಭವ ಇದೆ,
(ii) (ನನಗೆ ನನ್ನ ಕೈಯಲ್ಲಿರುವ ಯಾವದೋ ಉರಟಾದ ವಸ್ತುವಿನ ಅನುಭವ ಇದೆ,
(iii)ನನಗೆ ನನ್ನ ಕೈಯಲ್ಲಿರುವ ತಣ್ಣಗಿನ ವಸ್ತುವಿನ ಅನುಭವ ಇದೆ,
(iv)ನನ್ನ ಕೈಯಲ್ಲಿ ಒಂದು ಮಂಜು ಗೆಡ್ಡೆ ಇದೆ ಎನ್ನುವ ಪ್ರತಿಪಾದನೆ (i)-(iii) ರ ಜೊತೆ ಸುಸಂಬದ್ಧವಾಗಿದೆ. (iv)ಹೇಳಿಕೆ (i)-(iii) ರ ಜೊತೆ ಬೇರೆ ಹೇಳಿಕೆಗಳಿಂದ ಹೆಚ್ಚು ಸುಸಂಬದ್ಧವಾಗಿದೆ. ಉದಾಹರಣೆಗೆ, ನನ್ನ ಕೈಯಲ್ಲಿ ಒಂದು ಬಿಸಿಯಾದ ಕಲ್ಲಿದ್ದಲಿನ ಉಂಡೆಯಿದೆ ಎನ್ನುವ ಹೇಳಿಕೆಗಿಂತ ಹೆಚ್ಚು ಸುಸಂಬದ್ಧ.

ಕೆಲ ತತ್ತ್ವಶಾಸ್ತ್ರಜ್ಞರು ಒಂದು ಪ್ರತಿಪಾದನೆ ಇನ್ನೊಂದು ಪ್ರತಿಪಾದನೆಯೊಂದಿಗೆ ಸುಸಂಬದ್ಧವಾಗಿರುವುದು ಅಥವಾ ಹೊಂದಿಕೊAಡಿರುವುದು, ಅದರ ಸತ್ಯತೆಯನ್ನು ತೋರುತ್ತದೆ ಅಥವಾ ಅದನ್ನು ಸತ್ಯ ಎಂದು ತಿಳಿಯಲು ಕಾರಣವಾಗುತ್ತದೆ ಎಂದು ತೆಗೆದು ಕೊಳ್ಳುತ್ತಾರೆ. ಬೇರೆ ಪದಗಳಲ್ಲಿ ಹೇಳುವುದಾದರೆ ಅವರು ಸುಸಂಬದ್ಧತೆಯನ್ನು ಸತ್ಯಕ್ಕೆ ಸಮರ್ಥನೆಯ ಮೂಲವೆಂದು ನಿರೂಪಿಸುತ್ತಾರೆ.

ಆದ್ದರಿಂದ ಉದಾಹರಣೆಗೆ; ಒಬ್ಬ (i)-(iii), ನ್ನು ನಂಬಿದರೆ words missing (iv) ನಂಬುವುದು ವ್ಯಕ್ತಿ ಕೈಯಲ್ಲಿ ಸುಡುವ ಕಲ್ಲಿದ್ದಿಲಿನ ಉಂಡೆ ಹಿಡಿದಿದ್ದಾನೆ ಎನ್ನುವುದಕದಕ್ಕಿಂತ ಹೆಚ್ಚು ಸುಸಂಬದ್ಧ. ಏಕೆಂದರೆ (iv) ಉ, (i) ಮತ್ತು (iii) ರೊಂದಿಗೆ ಹೆಚ್ಚು ಸುಸಂಗತವಾಗಿದೆ.

ಸತ್ಯದ ಸುಸಂಬದ್ಧತೆಯ ಸಿದ್ಧಾಂತದ ಪ್ರತಿಪಾದಕರು ಸುಸಂಬದ್ಧತೆಯನ್ನು ಕೇವಲ ಸಮರ್ಥನೆಯ ಮೂಲ ಎಂದು ನಿರೂಪಿಸುವುದಲ್ಲದೇ ಅದನ್ನು ಸತ್ಯದ ಒಂದು ಷರತ್ತನ್ನಾಗಿ ತೆಗೆದುಕೊಳ್ಳುತ್ತಾರೆ. ಒಂದು ಪ್ರತಿಪಾದನೆ ಸತ್ಯವಾಗುವುದು ಎಂದರೆ ಅದು ಇತರ

ಪ್ರತಿಪಾದನೆಗಳ ಜೊತೆಗೆ ಸುಸಂಬದ್ಧವಾಗಿರುವುದಲ್ಲದೇ ಬೇರೇನೂ ಅಲ್ಲ ಎನ್ನುವುದನ್ನು ಎತ್ತಿ ಹಿಡಿಯುತ್ತಾರೆ. ಬ್ರಾಂಡ್ ಬ್ಲಾನ್‌ಶಾರ್ಡ್ ಎನ್ನುವ ಸುಸಂಬದ್ಧತೆಯ ಸಿದ್ಧಾಂತದ ರಕ್ಷಕ "ಸುಸಂಬದ್ಧತೆಯನ್ನು ಪರೀಕ್ಷೆಯಾಗಿ [ಸತ್ಯದ] ಕಲ್ಪಿಸಿ, ಆಗ ನೀವು ನಿಮ್ಮ ಅಸಂಬದ್ಧವಾದ ಪರ್ಯಾಯಗಳಿಂದ ನಿಮ್ಮ ನಿರ್ಣಯಗಳ ಕಡೆ ಚಾಲಿತವಾಗುತ್ತೀರಿ, ಎನ್ನುವುದು ಕೂಡಾ ಸತ್ಯದ ಸ್ವಭಾವ" ಎಂದು ಬರೆದ.

ಸತ್ಯದ ಸುಸಂಬದ್ಧತೆಯ ಸಿದ್ಧಾಂತದ ಟೀಕಾಕಾರರು ವೈವಿಧ್ಯಮಯವಾದ ಆಕ್ಷೇಪಣೆಗಳನ್ನು ಎತ್ತುತ್ತಾರೆ.

ಮೊದಲನೆಯದಾಗಿ, 'ಸುಸಂಬದ್ಧತೆ' ಪರಿಕಲ್ಪನೆಯೇ ಮಬ್ಬಾಗಿದೆ. ಕೆಲವು ವಿಮರ್ಶಕರಂತೂ ಸುಸಂಬದ್ಧತೆ ಎನ್ನುವ ಪರಿಕಲ್ಪನೆ 'ಸಾದೃಶ್ಯ' ಮತ್ತು 'ತತ್ಯ' ಎನ್ನುವ ಪರಿಕಲ್ಪನೆಗಳಷ್ಟೇ ವಿವರಣೆಯನ್ನು ಬಯಸುತ್ತವೆ ಎಂದು ಸಾಧಿಸುತ್ತಾರೆ. ಸತ್ಯದ ಅನುರೂಪ ಸಿದ್ಧಾಂತಕ್ಕಿಂತ ಸುಸಂಬದ್ಧತೆಯ ಸಿದ್ಧಾಂತದಲ್ಲಿ ಯಾವುದೇ ಹೆಚ್ಚಿನ ಅನುಕೂಲಗಳಿಲ್ಲ ಎಂದು ಅವರು ತಿಳಿಸುತ್ತಾರೆ. ಎರಡನೆಯದಾಗಿ, ನಾವು ಯಾವುದೋ ಒಂದು ಪ್ರತಿಪಾದನೆ ಕೇವಲ ಒಂದು ಪ್ರತಿಪಾದನೆಗಳ ಗುಂಪಿನಲ್ಲಿ ಸುಸಂಬದ್ಧವಾಗಿದ್ದರೆ ಮಾತ್ರ, ಅದನ್ನು ಸತ್ಯ ಎನ್ನಲು ಆಗುವುದಿಲ್ಲ. ತುಂಬಾ ವಾಸ್ತವಿಕವಾದ ಕಟ್ಟುಕತೆಯೊಂದು ಸುಳ್ಳು ಪ್ರತಿಪಾದನೆಗಳ ಸುಸಂಬದ್ಧ ಸರಣಿಯಾಗಿರ ಬಹುದು. ಮೇಲಿನ ಉದಾಹರಣೆಯಲ್ಲಿ (iv)ನೆಯ ಪ್ರತಿಪಾದನೆ (i) ಮತ್ತು (iii) ನೆಯ ಪ್ರತಿಪಾದನೆಗಳ ಜೊತೆಗೆ ಸುಸಂಬದ್ಧವಾಗಿದೆ ಎನ್ನುವುದು (iv) ಸತ್ಯವಾಗಿದೆ ಎನ್ನುವುದಕ್ಕೆ ಖಾತರಿಯೇನಲ್ಲ.ನಾನು (i)ಮತ್ತು (iv) ನ್ನು ನಂಬಬಹುದು ಮತ್ತು ನಾನು ಕೈಯಲ್ಲಿ ಮಂಜುಗಡ್ಡೆಯನ್ನು ಹಿಡಿದಿದ್ದೇನೆ ಎಂದು ಬರಿಯ ಭ್ರಮೆಗೊಳಗಾಗ ಬಹುದು ಅಥವಾ ಕನಸು ಕಾಣಬಹುದು. ನಿಜಕ್ಕೂ, ಡೆಕಾರ್ಟೆ ಒಂದು ಕೆಟ್ಟ ದೆವ್ವದಿಂದ ಪ್ರಪಂಚದ ಬಗೆಗಿನ, ನಮ್ಮ ಎಲ್ಲ ಇಂದ್ರಿಯಾನುಭವಗಳು ಭ್ರಮಾತ್ಮಕವಾಗುವಷ್ಟು ಭಾರಿಯಾದ ಮಹಾಮೋಸದ ಸಾಧ್ಯತೆಯ ಬಗೆಗೆ ತಿಳಿಸಿದ. ಅಂತಹ ದೃಶ್ಯಾವಳಿಗಳಲ್ಲಿ ನಮ್ಮ ಸುತ್ತು ಮುತ್ತಲಿನ ನಮ್ಮ ಪ್ರಪಂಚದ ಬಗೆಗಿನ ನಮ್ಮ ಎಲ್ಲ ನಂಬಿಕೆಗಳೂ ಪೂರ್ಣವಾಗಿ ಅಸತ್ಯವಾಗಿರುತ್ತವೆ. ಆದರೂ ಅವೆಲ್ಲವೂ ಸುಸಂಬದ್ಧವಾಗಿಯೇ ಇರಬಹುದು. ಅಂತಹ ಸಂದರ್ಭದಲ್ಲಿ ನಮ್ಮ ನಂಬಿಕೆಗಳು ಈಗ ಇರುವಷ್ಟೇ ಸುಸಂಬದ್ಧತೆಯನ್ನು ಹೊಂದಿರುತ್ತವೆ. ಆದರೂ ಅವುಗಳೆಲ್ಲ ಅಸತ್ಯವಾಗಿರುತ್ತವೆ. ಅಂತಿಮವಾಗಿ, ವಿಮರ್ಶಕರು ಸಮರ್ಥನೆಯ ಒಂದು ಲಕ್ಷಣವನ್ನು ಸತ್ಯದ ಒಂದು ಷರತ್ತಾಗಿ ಗೊಂದಲ ಮಾಡಿಕೊಳ್ಳಬಾರದು ಎಂದು ವಾದಿಸುತ್ತಾರೆ. ನಾವು ಸಮರ್ಥನೆಗೆ ಲಕ್ಷಣವಿದ್ದರೆ ತತ್ಸಂಗತಿಯನ್ನೇ ಸತ್ಯದ ಷರತ್ತಾಗಿ ಭಾವಿಸ ಬಾರದು. ಸುಸಂಬದ್ಧತೆ ಸಮರ್ಥನೆಯ ಆಕರವಾಗಿದ್ದರೂ ಅದೇ ಒಂದು ಪ್ರತಿಪಾದನೆಯನ್ನು ಸತ್ಯವಾಗಿಸುವ ಸಂಗತಿಯಾಗುವುದಿಲ್ಲ ಎಂದು ವೇದ್ಯವಾಗುವುದು.

## ಜ್ಞಾನಾತ್ಮಕ ಸಮರ್ಥನೆ.

ಸಾಂಪ್ರದಾಯಿಕ ಸಮರ್ಥಿತ ಸತ್ಯ ನಂಬಿಕೆಯ ಆಖ್ಯಾನದ (ಖಾತೆಯ) ಪ್ರಕಾರ ಜ್ಞಾನಾತ್ಮಕಸಮರ್ಥನೆಯು 'ಪಿ'ಯ ಜ್ಞಾನ ವ್ಯಕ್ತಿ, 'ಪಿ' ಯನ್ನು ನಂಬುವುದರಲ್ಲಿ ಜ್ಞಾನಾತ್ಮಕವಾಗಿ ಸಮರ್ಥಿಸಲ್ಪಟ್ಟಿರಬೇಕು ಎಂದು ಬಯಸುತ್ತದೆ. ಈ ಪುಸ್ತಕದ ಬಹುಭಾಗ ಜ್ಞಾನಾತ್ಮಕ ಸಮರ್ಥನೆಯ ವಿಷಯವನ್ನು ಪರಿಗಣಿಸುತ್ತದೆ. ನಿಜವಾಗಿ ಇತ್ತೀಚಿನ ಜ್ಞಾನಶಾಸ್ತ್ರ ಬಹು ಪಾಲು ಈ ವಿಷಯದ ಮೇಲೆ ಬೆಳಕು ಚೆಲ್ಲಿದೆ. ಸಧ್ಯಕ್ಕೆ ಈ ಕೆಳಗಿನ ಅಂಶಗಳನ್ನು ಗಮನಿಸ ಬಹುದು.

ಮೊದಲನೆಯದಾಗಿ, ಜ್ಞಾನ ಬಯಸುವ ರೀತಿಯ ಸಮರ್ಥನೆ ಜ್ಞಾನಾತ್ಮಕ ಸಮರ್ಥನೆ.ಜ್ಞಾನಾತ್ಮಕವಲ್ಲದ ರೀತಿಯ ಸಮರ್ಥನೆಗಳು ಇವೆಯೆಂದು ಗಮನಿಸ ಬೇಕು.

ಅಗಲಿಗೆ ಕಾಲಿರಿಸಿದ ದಾಂಡುಗಾರ ತಾನು ಗುರಿಯೇಟು ಹೊಡೆಯುತ್ತೇನೆ ಎಂದು ನಂಬಿದರೆ ಒಂದು ಗುರಿಯೇಟು ಹೆಚ್ಚಿಗೆ ಪಡೆಯಬಹುದು. ಹಾಗೆಯೇ ಆತ ಗುರಿಯೇಟು ಪಡೆಯದೇಯು ಇರಬಹುದು. ಅತ್ಯುತ್ತಮ ದಾಂಡುಗಾರನಿಗೂ ಈ ತರದ ವಿಲಕ್ಷಣತೆ ಕ್ಷೀಣವಾಗಿರುತ್ತದೆ. ಆದರೂ ತಾನು ಗೆಲ್ಲುತ್ತೇನೆ ಎನ್ನುವ ಧನಾತ್ಮಕ ಮನೋಭಾವ ಅವನಿಗೆ ಸಹಾಯ ಮಾಡುತ್ತದೆ. ಆದುದರಿಂದ ನಾವು ಅವನ ನಂಬಿಕೆಗೆ ಜ್ಞಾನಾತ್ಮಕ ಸಮರ್ಥನೆ ಇಲ್ಲದಿದ್ದರೂ ಪ್ರಾಯೋಗಿಕ ಸಮರ್ಥನೆ ಇದೆ ಎಂದು ಪರಿಗಣಿಸಬಹುದು. ಪುನಃ, ಬಹಳ ಜನರು ಚೇತರಿಸಿಕೊಳ್ಳಲು ಸಾಧ್ಯವಾಗದ, ಪ್ರಾಣಭಯ ತರುವ ಖಾಯಿಲೆಯನ್ನು ಎದುರಿಸುತ್ತಿರುವ ಯಾರಾದರೊಬ್ಬರನ್ನು ಪರಿಗಣಿಸೋಣ. ಸಾಕ್ಷ್ಯಾಧಾರಗಳು ಚೇತರಿಸಿ ಕೊಳ್ಳುವುದರ ವಿರುದ್ಧವೇ ಇದ್ದರೂ, ತಾನು ಚೇತರಿಸಿಕೊಳ್ಳುತ್ತೇನೆ ಎನ್ನುವ ನಂಬಿಕೆ ಚೇತರಿಸಿಕೊಳ್ಳುವ ಅವಕಾಶಗಳನ್ನು ಹೆಚ್ಚಿಸ ಬಹುದು. ಇಂತಹ ಪ್ರಕರಣದಲ್ಲಿ ವ್ಯಕ್ತಿಗೆ ಆತ ಚೇತರಿಸಿಕೊಳ್ಳುತ್ತಾನೆ ಎಂದು ನಂಬಲು ಜ್ಞಾನಾತ್ಮಕ ಸಮರ್ಥನೆಗಳು ಇಲ್ಲದಿದ್ದರೂ ನೈತಿಕ ಅಥವಾ ವಿವೇಕಯುತ ಸಮರ್ಥನೆ ಇದೆ. ವಿವೇಕಯುತ ಅಥವಾ ನೈತಿಕ ಸಮರ್ಥನೆಗಿಂತ ವಿಭಿನ್ನವಾದ ರೀತಿಯಲ್ಲಿ ಜ್ಞಾನಾತ್ಮಕ ಸಮರ್ಥನೆ ಸತ್ಯದೊಂದಿಗೆ ಪ್ರಮುಖ ಮಾರ್ಗದಲ್ಲಿ ಕಟ್ಟಲ್ಪಟ್ಟಿದೆ. ಆದರೆ ಯಾವ ಮಾರ್ಗದಲ್ಲಿ ಅದು ಸತ್ಯದೊಂದಿಗೆ ಸಂಪರ್ಕಿತವಾಗಿದೆ ಎಂದು ಸ್ಪಷ್ಟವಾಗಿ ಹೇಳುವುದು ಕಠಿಣ. ವಿವೇಕಯುತ ಮತ್ತು ನೈತಿಕ ಸಮರ್ಥನೆಗಳು ಮಾಡದ ರೀತಿಯಲ್ಲಿ ಜ್ಞಾನಾತ್ಮಕ ಸಮರ್ಥನೆ ಸತ್ಯವನ್ನು ಗುರಿಮಾಡಿಕೊಂಡಿರತ್ತದೆ.ಬಹುಷ್ಯಃ ನಾವು ಒಬ್ಬ ಪ್ರತಿಪಾದನೆಯನ್ನು ಜ್ಞಾನಾತ್ಮಕವಾಗಿ ಸಮರ್ಥಿತ ರೀತಿಯಲ್ಲಿ ನಂಬಿದ್ದರೆ ಅವನ ನಂಬಿಕೆ ಸತ್ಯವಾಗಿರುತ್ತದೆ ಎಂದು ಹೇಳ ಬಹುದು.

ನಾವು ಕಾಣುವಂತೆ ತತ್ತ್ವ ಶಾಸ್ತ್ರಜ್ಞರು ಸತ್ಯ ಮತ್ತು ಜ್ಞಾನಾತ್ಮಕ ಸಮರ್ಥನೆಯ ನಡುವಿನ ಸಂಪರ್ಕಗಳ ಬಗೆಗೆ ಭಿನ್ನ ಮತ ಹೊಂದಿದ್ದಾರೆ. ವಿಷಯ ಯಾವುದೇ ಇರಲಿ, ನಮ್ಮ ಕೇಂದ್ರೀಕರಣ ಜ್ಞಾನಾತ್ಮಕ ಸಮರ್ಥನೆಯ ಬಗೆಗಿರುತ್ತದೆ. ಇಲ್ಲಿಂದ ಮುಂದೆ ನಾನು ಸಮರ್ಥನೆ ಎಂದು ಉಲ್ಲೇಖಿಸುವಗಲೆಲ್ಲ ಜ್ಞಾನಾತ್ಮಕ ಸಮರ್ಥನೆಯ ಬಗೆಗೇ ಉಲ್ಲೇಖಿಸುತ್ತಿರುತ್ತೇನೆ.

ಎರಡನೆಯದಾಗಿ ಒಂದು ಪ್ರತಿಪಾದನೆ ಸಮರ್ಥಿತವಲ್ಲದಿದ್ದರೂ ಸತ್ಯವಾಗಿರಬಹುದು.

(1)ತಾರೆಗಳ ಸಂಖ್ಯೆ ಸಮಸಂಖ್ಯೆ ಮತ್ತು (11) ತಾರೆಗಳ ಸಂಖ್ಯೆ ಸಮ ಸಂಖ್ಯೆಯಲ್ಲ. ಒಂದೋ (1) ಅಥವಾ (11) ಯದ್ದು ಸತ್ಯ. ಸ್ಪಷ್ಟವಾಗಿ (1) ಆಗಲೀ (11) ಆಗಲೀ ಸಮರ್ಥಿತವಾಗುವುದಿಲ್ಲ. ನಮಗೆ ಎರಡಕ್ಕೂ ಸಾಕ್ಷ್ಯಾಧಾರಗಳಿಲ್ಲ. ಆದ್ದರಿಂದ ಒಂದು ಪ್ರತಿಪಾದನೆಯು ನಮಗೆ ಸಮರ್ಥಿತವಾಗದೇ ಸತ್ಯವಾಗಲು ಸಾಧ್ಯ. ಪುನಃ, ಮಂಗಳಗ್ರಹದಲ್ಲಿ ಜೀವಿಗಳಿವೆ ಎನ್ನುವ ಪ್ರತಿಪಾದನೆ ಸತ್ಯವಾಗಿರಬಹುದು. ಆದರೆ ಈಗ ದೊರೆಯುವ ಸಾಕ್ಷ್ಯಾಧಾರಗಳ ಪರಿಸ್ಥಿತಿಯಲ್ಲಿ ಅದನ್ನು ನಂಬುವುದರಲ್ಲಿ ನಾವು ಸಮರ್ಥಿತರಲ್ಲ.ಈ ಪ್ರತಿಪಾದನೆಗಳನ್ನು ಕುರಿತಾಗಿ ವ್ಯಕ್ತಿ ಅದನ್ನು ನಂಬುವುದರಲ್ಲಿ ಸಮರ್ಥನೆ ಎಲ್ಲ ಎಂದು ನಾವು ಹೇಳ ಬಹುದು. ಬದಲಾಗಿ ಒಬ್ಬನು ಆ ನಂಬಿಕೆಗಳನ್ನು ಅಮಾನತ್ತಿನಲ್ಲಿಡುವುದರಲ್ಲಿ ಸಮರ್ಥಿತನಾಗಿರುತ್ತಾನೆ.

ಮೂರನೆಯದಾಗಿ ಒಂದು ಪ್ರತಿಪಾದನೆ ಸಮರ್ಥಿಸಲ್ಪಟ್ಟಿರಬಹುದು ಮತ್ತು ಅಸತ್ಯವಾಗಿರಬಹುದು. ಒಬ್ಬ ಅಸತ್ಯವಾದ ಪ್ರತಿಪಾದನೆಯನ್ನು ನಂಬುವುದರಲ್ಲಿ ಸಮರ್ಥಿತನಾಗಿರಬಹುದು. ಉದಾಹರಣೆಗೆ ನೀವು ಅದನ್ನು ಮಧ್ಯಾಹ್ನ ಎಂದು ನಂಬುವುದರಲ್ಲಿ ಸಮರ್ಥಿತರಾಗಿದ್ದೀರಿ ಎಂದು ಭಾವಿಸೋಣ. ಏಕೆಂದರೆ ನೀವು ನಿಮ್ಮ ಗಡಿಯಾರವನ್ನು ಹಗಲಿನ ಮಧ್ಯದಲ್ಲಿ ನೋಡಿಕೊಂಡಿದ್ದೀರಿ ಮತ್ತದು ಅದು ಮಧ್ಯಾಹ್ನ ಎಂದು ಹೇಳುತ್ತಿದೆ. ಆದರೆ ನಿಮಗೆ ತಿಳಿಯದಂತೆ ನಿಮ್ಮ ಗಡಿಯಾರ ನಿಂತುಹೋಗಿದ್ದರೆ

ಈಗಾಗಲೇ 12:30 ಗಂಟೆ ದಾಟಿದ್ದರೆ, ನಿಮ್ಮ ನಂಬಿದೆ ನಿಮ್ಮ ಸಾಕ್ಷಾ್ಕರಯಧಾರದ ಪ್ರಕಾರ ಸಮರ್ಥಿತವಾಗಿದೆ ಆದರೆ ಅದು ಅಸತ್ಯವಾಗಿದೆ. ಮತ್ತೊಮ್ಮೆ, ನಾನು ನೋಡಿದ ಗ್ರಂಥಾಲಯಕ್ಕೆ ಹೋಗುತ್ತಿರುವ ವ್ಯಕ್ತಿ ಲೀಸಾ ಎಂದು ನಾನು ನಂಬ ಬಹುದು. ನಾನು ನೋಡಿದ ವ್ಯಕ್ತಿ ಲೀಸಾಳ ಹಾಗೆ ಕಾಣುತ್ತಿದ್ದು ,ಉಡುಪು, ಮತ್ತು ವರ್ತನೆಗಳೂ ಲೀಸಾಳ ಹಾಗೆ ಇವೆ. ಆದರೆ ನನಗೆ ತಿಳಿಯದಂತೆ ಲೀಸಾಳಿಗೆ ಒಬ್ಬ ಸಮರೂಪಅವಳಿ ಸೋದರಿಯಿದ್ದು, ನಾನು ಲೀಸಾಳ ಬದಲು ಅವಳ ಅವಳಿಯನ್ನು ನೋಡುತ್ತಿರ ಬಹುದು ಎಂದು ಊಹಿಸೋಣ. ನಾನು ನೋಡಿದ ವ್ಯಕ್ತಿ ಲೀಸಾ ಎಂದು ನಂಬಿದ್ದು ತಪ್ಪು ಆದರೆ ಅದು ಸಮರ್ಥಿತವಾಗಿದೆ.

ನಾಲ್ಕನೆಯದಾಗಿ, ನಾವು ಒಬ್ಬ ವ್ಯಕ್ತಿ ಒಂದು ಪ್ರತಿಪಾದನೆಯನ್ನು ಸಮರ್ಥಿಸುವುದನ್ನು ಅದು ಅವನಿಗೆ ಸಮರ್ಥಿತವಾಗಿರುವುದರಿಂದ ಬೇರ್ಪಡಿಸ ಬೇಕು. ಒಂದು ಪ್ರತಿಪಾದನೆಯನ್ನು ಸಮರ್ಥಿಸುವುದು ಯಾರೊಬ್ಬ ವ್ಯಕ್ತಿ ತನ್ನ ನಂಬಿಕೆಗೆ ಸವಾಲೊದಗಿದಾಗ, ತೊಡಗಿಕೊಳ್ಳುವ ಕ್ರಿಯೆ.ಪ್ರಾತಿನಿಧಿಕವಾಗಿ ಯಾರೊಬ್ಬ ಪ್ರತಿಪಾದನೆಯನ್ನು ಸಮರ್ಥಿಸುವಾಗ ಅದರ ಪರವಾಗಿ ಆಧಾರ ಒದಗಿಸಲು ಯತ್ನಿಸುತ್ತಾನೆ. ಇದಕ್ಕೆ ವಿರೋಧವಾಗಿ ಪ್ರತಿಪಾದನೆ ವ್ಯಕ್ತಿಗೆ ಸಮರ್ಥಿತವಾಗಿರುವುದು ಎಂದರೆ ಅದು ಅವನಿರುವ ಸ್ಥಿತಿ. 'ಪಿ' ಯ ಜ್ಞಾನ ಒಬ್ಬ ವ್ಯಕ್ತಿ ಅದನ್ನು ನಂಬುವುದರಲ್ಲಿ ಸಮರ್ಥಿತನಾಗಿರಬೇಕೆಂಬುದನ್ನು ಬಯಸುತ್ತದೆ. ಆದರೆ ತಾನು ತಾನು ನಂಬುವ 'ಪಿ' ಯನ್ನು ತಾನೆ ಸಮರ್ಥಿಸ ಬೇಕೆಂದೇನೂ ಬಯಸುವುದಿಲ್ಲ.

ಐದನೆಯದಾಗಿ, ನಾವೆಲ್ಲರೂ ಸಾಕಷ್ಟು ವಿಷಯಗಳ ಜ್ಞಾನ ಹೊಂದಿದ್ದೇವೆ ಆದರೆ ಸಮರ್ಥಿಸಲು ಪ್ರಯತ್ನಿಸಿಲ್ಲ. ಸತ್ಯಕ್ಕಿಂತ ಭಿನ್ನವಾಗಿ ಸಮರ್ಥನೆ ಸಾಪೇಕ್ಷ. ಒಬ್ಬನಿಗೆ ಸಮರ್ಥಿತವಾದದ್ದು ಇನ್ನೊಬ್ಬನಿಗೆ ಸಮರ್ಥಿತವಾಗದೇ ಇರ ಬಹುದು. ಒಬ್ಬನ ಬಳಿಯಲ್ಲಿ ಇನ್ನೊಬ್ಬನ ಬಳಿ ಇಲ್ಲದಿರುವ ಆಧಾರಗಳು ಇದ್ದರೆ ಇದು ಸಂಭವಿಸ ಬಹುದು. ಉದಾಹರಣೆಗೆ ಸ್ಮಿಥ್ ಒಬ್ಬ ಕಳ್ಳ ಎಂದು ಭಾವಿಸೋಣ. ಸ್ಮಿಥ್ ಕಳ್ಳ ಎನ್ನುವ ಪ್ರತಿಪಾದನೆ ಸ್ಮಿಥ್ ಒಬ್ಬನಿಗೆ ಸಮರ್ಥಿತವಾಗಿರಬಹುದು ಆದರೆ ಬೇರೆ ಯಾರಿಗೂ ಅಲ್ಲ. ಸ್ಮಿಥ್ ಕಳ್ಳ ಎನ್ನುವುದಕ್ಕೆ ಸಾಕಷ್ಟು ಆಧಾರ ಹೊಂದಿರಬಹುದು. ಬೇರೆ ಯಾರ ಬಳಿಯೂ ಆ ಆಧಾರಗಳು ಇಲ್ಲದಿರಬಹುದು. ಸ್ಮಿಥ್‌ನ ಅನೇಕ ಸ್ನೇಹಿತರು ಆತ ಕಳ್ಳನಲ್ಲ ಎಂದು ಭಾವಿಸುವುದರಲ್ಲಿ ಸಮರ್ಥಿತರಾಗಿದ್ದಾರೆ ಎಂದು ನಾವು ಕಲ್ಪಿಸಬಹುದು. (ಇಲ್ಲಿ ನಾವು ಮತ್ತೊಮ್ಮೆ ಸಮರ್ಥಿತವಾದ ಆದರೆ ಸುಳ್ಳಾದ ನಂಬಿಕೆಗೆ ಉದಾಹರಣೆಯೊಂದನ್ನು ನಾವು ನೋಡುತ್ತೇವೆ. ಮುಂದು ವರೆಸುತ್ತಾ ಒಂದು ಪ್ರತಿಪಾದನೆ ಒಬ್ಬ ವ್ಯಕ್ತಿಗೆ ಒಂದು ಕಾಲದಲ್ಲಿ ಸತ್ಯವಾಗಿದ್ದು ಮತ್ತೊಂದು ಕಾಲದಲ್ಲಿ ಸುಳ್ಳಾಗ ಬಹುದು.

ಸ್ಮಿಥ್‌ನನ್ನು ಹಿಡಿದು,ವಿಚಾರಣೆ ಮಾಡಿ, ಶಿಕ್ಷೆ ವಿಧಿಸಿದ ಮೇಲೆ ಆ ವಿಚಾರಣೆಯನ್ನು ನಿಕಟವಾಗಿ ಅನುಸರಿಸಿದ ಅವನ ಸ್ನೇಹಿತರು ಅವನು ಕಳ್ಳ ಎಂದು ನಂಬುವುದರಲ್ಲಿ ಸಮರ್ಥಿತರಾಗುತ್ತಾರೆ. ಅವರಲ್ಲಿ ಈಗ ಹಿಂದೆ ಅವರಲ್ಲಿ ಇಲ್ಲದಿದ್ದ ಆಧಾರಗಳಿವೆ. ಸಮರ್ಥನೆ ಒಬ್ಬ ವ್ಯಕ್ತಿಯಿಂದ ಇನ್ನೊಬ್ಬ ವ್ಯಕ್ತಿಗೆ ಬದಲಾಗ ಬಹುದು ಮತ್ತು ಒಬ್ಬನೇ ವ್ಯಕ್ತಿಯಲ್ಲಿ ಒಂದು ಕಾಲದಿಂದ ಮತ್ತೊಂದು ಕಾಲಕ್ಕೆ , ಹೊಂದಿದ ಆಧಾರಗಳನ್ನು ಅವಲಂಬಿಸಿ ಬದಲಾಗ ಬಹುದು.

ಆರನೆಯದಾಗಿ, ಜ್ಞಾನಾತ್ಮಕ ಸಮರ್ಥನೆ ತರತಮ ಭಾವದಲ್ಲಿ ಬರುತ್ತದೆ. ಅದು ಖಚಿತವಾಗಿ ಅಥವಾ ಗರಿಷ್ಠತಮ ಸಮರ್ಥಿತವಾಗಿರುವ ಪ್ರತಿಪಾದನೆಗಳಿಂದ ಅಂಗೀಕರಿಸಲು ಸಾಕಾಗುವಷ್ಟು ಕನಿಷ್ಠತಮ ಸಮರ್ಥಿತ ಪ್ರತಿಪಾದನೆಗಳ ವರೆಗೆ ಹರಡಿಕೊಳ್ಳುತ್ತವೆ. 2=2, ನಾನು ಚಿಂತಿಸುತ್ತೇನೆ ಆದ್ದರಿಂದ ನಾನು ಅಸ್ತಿತ್ವದಲ್ಲಿದ್ದೇನೆ ಎನ್ನುವ ಪ್ರತಿಪಾದನೆ ನನಗೆ ಖಚಿತ. ತದ್ವಿರೋಧವಾಗಿ ನಾನು ಮೂರು ತಿಂಗಳು ಜೀವಿಸಿರುತ್ತೇನೆ ಎನ್ನುವ ಪ್ರತಿಪಾದನೆ ನನ್ನ ಪಾಲಿಗೆ ಗರಿಷ್ಠವಾಗಿ ಪ್ರತಿಪಾದಿತವಾಗಿಲ್ಲ. ನಾನು ಬದುಕಿದ್ದೇನೆ ಎನ್ನುವುದು ನಾನು

ಮೂರು ತಿಂಗಳ ವರೆಗೂ ಬದುಕಿರುತ್ತೇನೆ ಎನ್ನುವುದಕ್ಕಿಂತ ಹೆಚ್ಚು ಸಮರ್ಥಿತ. ಹಾಗಿದ್ದರೂ ನಾನು ಮೂರು ತಿಂಗಳು ಬದುಕಿರುತ್ತೇನೆ ಎನ್ನುವುದರಲ್ಲಿ ನಾನು ಸಮರ್ಥಿತ. ಮಂಗಳನಲ್ಲಿ ಜೀವಿಗಳಿವೆ ಅಥವಾ ನಕ್ಷತ್ರಗಳ ಸಂಖ್ಯೆ ಸಮ ಸಂಖ್ಯೆಯಾಗಿದೆ ಎಂದು ನಂಬುವುದಕ್ಕಿAತ ನಾನು ಮೂರು ತಿಂಗಳ ಕಾಲ ಬದುಕಿರುತ್ತೇನೆ ಎನ್ನುವ ಪ್ರತಿಪಾದನೆ ಹೆಚ್ಚು ಸಮರ್ಥಿತ.

ಜ್ಞಾನಕ್ಕೆ ಸಮರ್ಥನೆ ಬೇಕು ಎಂದಾದರೆ ಯಾವ ಮಟ್ಟದ (ಯಾವ ತರದ ಯಾವ ಸ್ತರದ) ಸಮರ್ಥನೆ ಅಗತ್ಯವಿದೆ? ಎಂದು ನಾವು ಕೇಳಬಹುದು. ಕಟ್ಟುನಿಟ್ಟಾಗಿ ಹೇಳ ಬೇಕೆಂದರೆ ಡಿ3 ಇದನ್ನು ನಮಗೆ ಹೇಳುವುದಿಲ್ಲ. ಯಾವುದೇ ಮಟ್ಟದ ಸಮರ್ಥನೆ ಸಾಕಾಗುತ್ತದೆ ಎಂದು ಹೇಳುವುದಿಲ್ಲ ಎಂದು ನಂಬುವುದು ಉಚಿತ ಎನಿಸುತ್ತದೆ. ನಾನು ಹತ್ತು ವರ್ಷಗಳ ಕಾಲ ಬದುಕಿರುತ್ತೇನೆ ಎನ್ನುವದಕ್ಕೆ ಯಾವುದೋ ಮಟ್ಟದ ಸಮರ್ಥನೆ ನನ್ನ ಪಾಲಿಗಿದೆ ಆದರೆ ಆ ಸಮರ್ಥನೆ ಅದು ಜ್ಞಾನ ಎಂದು ತಿಳಿಯಲು ಸಾಲದು. ಅದೇ ರೀತಿಯಲ್ಲಿ ಒಂದು ತಂಬಿಗೆಯಲ್ಲಿರುವ 100ರಲ್ಲಿ 60 ಗೋಲಿಗಳು ಕಪ್ಪಾಗಿದ್ದರೆ ನಾನು ಒಂದು ಕಪ್ಪು ಗೋಲಿಯನ್ನು ಹೆಕ್ಕಿರ ಬಹುದು ಎನ್ನುವ ಪ್ರತಿಪಾದನೆಗೆ ನನ್ನ ಪಾಲಿಗೆ ಧನಾತ್ಮಕ ಸಮರ್ಥನೆ ಇರತ್ತದೆ ಆದರೆ ಹಾಗೆಯೇ ಆಗುತ್ತದೆ ಎನ್ನುವುದಕ್ಕೆ ಸಾಕಷ್ಟು ಸಮರ್ಥನೆ ಇರುವುದಿಲ್ಲ. ಹಾಗಾಗಿ ಕೆಲ ಮಟ್ಟದ ಜ್ಞಾನಕ್ಕೆ ಕೆಲ ಮಟ್ಟದ ಸಮರ್ಥನೆಗಳು ತೀರಾ ಕಡಿಮೆ ಎನಿಸುತ್ತದೆ. 'ಪಿ'ಎಂಬ ಜ್ಞಾನ ಪಿ ಯ ಬಗ್ಗೆ ಖಚಿತವಾಗಿರುವುದನ್ನು ಬಯಸುತ್ತದೆ ಎನ್ನೋಣವೇ? ಜ್ಞಾನಕ್ಕೆ ಗರಿಷ್ಠ ಸಮರ್ಥನೆಯ ಅಗತ್ಯವಿದೆ ಎನ್ನೋಣವೇ? ಜೆಟಿಬಿ ಸಮರ್ಥಿತ ಸತ್ಯ ನಂಬಿಕೆಯ ಖಾತೆಯ ಪರ ವಾದಿಸುವ ಬಹಳ ತತ್ತ್ವಶಾಸ್ತ್ರಜ್ಞರು ಜ್ಞಾನಕ್ಕೆ ಖಚಿತತೆಯ ಅಗತ್ಯವಿಲ್ಲ ಎಂದೇ ಹೇಳುತ್ತಾರೆ ಎಂದು ನಾನು ಯೋಚಿಸುತ್ತೇನೆ.

ಅವರು ವಿವೇಚನಾಯುತವಾಗಿ, ನಮಗೆ ವಾಷಿಂಗ್ಟನ್ ಸಂಯುಕ್ತ ಸಂಸ್ಥಾನದ ಮೊದಲ ಅಧ್ಯಕ್ಷನಾಗಿದ್ದ,- ಸೀಸರ್ ಕೊಲೆ ಮಾಡಲ್ಪಟ್ಟ, ಹೀಗೆ ಅನೇಕ ಇದೇ ರೀತಿಯ ಸಂಗತಿಗಳನ್ನು ತಿಳಿದು ಕೊಂಡಿದ್ದೇವೆ. ಈ ಯಾವ ಪ್ರತಿಪಾದನೆಗಳು ನಮಗೆ 2=2 ರಷ್ಟು ಅಥವಾ ನಾನು ಅಸ್ತಿತ್ವಲ್ಲಿದ್ದೇನೆ ಎನ್ನುವಷ್ಟು ಖಚಿತವಲ್ಲ. ಜೆಟಿಬಿ ಅಥವಾ ಸಮರ್ಥಿತ ಸತ್ಯ ನಂಬಿಕೆಯ ಪ್ರತಿಪಾದಕರು ಜ್ಞಾನಕ್ಕೆ ಖಚಿತತೆ ಅಗತ್ಯ ಎನ್ನುವುದಕ್ಕಿಂತ ಅದಕ್ಕೆ ಉನ್ನತ ಮಟ್ಟದ ಸಮರ್ಥನೆಯ ಅಗತ್ಯ ಇದೆ ಎಂದು ಹೇಳುತ್ತಾರೆ ಎನ್ನುವುದು ಹೆಚ್ಚು ಸಮಂಜಸ ಎಂದು ನಾನು ಭಾವಿಸುತ್ತೇನೆ.

ಅಂತಿಮವಾಗಿ ಒಂದು ಪ್ರತಿಪಾದನೆ ಒಬ್ಬ ವ್ಯಕ್ತಿಗೆ ಅವನು ಅದನ್ನು ನಂಬದಿದ್ದರೂ ಸಮರ್ಥಿತವಾಗಿರ ಬಹುದು. ದಾಂಡು ಪೆಟ್ಟಿಗೆಗೆ ಪ್ರವೇಶಿಸುವ ಆತ್ಮವಿಶ್ವಾಸವುಳ್ಳ ದಾಂಡುಗಾರನನ್ನು ತೆಗೆದು ಕೊಳ್ಳೋಣ. ಮತ್ತೆ ಇಲ್ಲವೇ ಇಲ್ಲ ಎನ್ನದಿದ್ದರೂ ಬಹುಬಾರಿ ಅತ್ಯಂತ ಶ್ರೇಷ್ಠತಮ ದಾಂಡುಗಾರರೂ ಹೊಡೆಯುವುದರಲ್ಲಿ ಅಸಫಲರಾಗಿದ್ದಾರೆ. ಆತ ಹೊಡೆಯುವುದಿಲ್ಲ ಎನ್ನುವ ಪ್ರತಿಪಾದನೆ ಆತನಿಗೆ ಸಮರ್ಥಿತವಾಗಿದೆ. ಪ್ರತಿಪಾದನೆ ಸಮರ್ಥಿತವಾಗಿದ್ದರೂ ಆತ ಅದನ್ನು ನಂಬುವುದಿಲ್ಲ. ನಿಜವಾಗಿ ಆತ ಅದರ ವಿರುದ್ಧವಾಗಿರುವುದನ್ನು ನಂಬುತ್ತಾನೆ. ಸದೃಶವಾದ ರೀತಿಯಲ್ಲಿ ಈ ದಿನ ಏನೋ ಭಯಂಕರವಾದದ್ದು ಸಂಭವಿಸುವುದಿಲ್ಲ ಎನ್ನುವ ಪ್ರತಿಪಾದನೆ ನಿರಾಶಾವಾದಿ ಮಾಲ್ಕೋಂಬನಿಗೆ ಸಮರ್ಥಿತವಾಗಿದೆ. ಆದರೆ ಆತ ಅದನ್ನು ನಂಬುವುದರಲ್ಲಿ ಅಸಫಲನಾಗುತ್ತಾನೆ.

ಕೆಲ ತತ್ತ್ವಶಾಸ್ತ್ರಜ್ಞರು ಒಬ್ಬ ವ್ಯಕ್ತಿಗೆ ಸಮರ್ಥಿತವಾದ ಮತ್ತು ವ್ಯಕ್ತಿಯಲ್ಲಿ ಸುಸಂಸ್ಥಾಪಿತವಾದ ಪ್ರತಿಪಾದನೆಗಳ ನಡುವೆ ವ್ಯತ್ಯಾಸ ಗುರುತಿಸುತ್ತಾರೆ. 5 'ಪಿ' ಪ್ರತಿಪಾದನೆ, 'ಎಸ್' ವ್ಯಕ್ತಿಯಲ್ಲಿ ಸುಸಂಸ್ಥಾಪಿತವಾಗಿದೆ ಎಂದರೆ

(i) 'ಪಿ'ಯು 'ಎಸ್' ಗೆ ಸಮರ್ಥಿತವಾಗಿದೆ ಮತ್ತು

(ii) 'ಎಸ್'ಉ 'ಪಿ'ಯನ್ನು ಅದರ ಸಾಕ್ಷ್ಯಾಧಾರಗಳ ಆಧಾರದಲ್ಲಿ ನಂಬುತ್ತಾನೆ ಎಂದೂ ಹೇಳಿದಂತೆ.

ಒಂದು ಪ್ರತಿಪಾದನೆ ಒಬ್ಬ ವ್ಯಕ್ತಿಯಲ್ಲಿ ಸುಸಂಸ್ಥಾಪಿತವಾಗಿದೆ ಎಂದರೆ ಆಗ ಆತ ಅದನ್ನು ನಂಬುತ್ತಾನೆ ಮತ್ತು ಆತ ಅದನ್ನು ಅದನ್ನು ಬೆಂಬಲಿಸುವ ಸಾಕ್ಷ್ಯಾಧಾರಗಳ ಆಧಾರದಲ್ಲಿ ನಂಬುತ್ತಾನೆ. 'ಪಿ'ಯ ಪ್ರತಿಪಾದನೆ ಒಬ್ಬ ವ್ಯಕ್ತಿಯಲ್ಲಿ ಸುಸಂಸ್ಥಾಪಿತವಾಗಿದ್ದರೆ ಆತನಿಗೆ ಅದನ್ನು ನಂಬಲು ಒಳ್ಳೆಯ ಕಾರಣಗಳಿರುವುದು ಮಾತ್ರವಲ್ಲ, ಆತ ಅದನ್ನು ಒಳ್ಳೆಯ ಕಾರಣಗಳ ಆಧಾರದಲ್ಲಿ ನಂಬುತ್ತಾನೆ. ಇಂತಹ ಪ್ರಕರಣಗಳಲ್ಲಿ ನಾವು ಆತನ ನಂಬಿಕೆ ಸುಸಂಸ್ಥಾಪಿತವಾಗಿದೆ ಅಥವಾ ಆತ ಸಮರ್ಥಿಸಲ್ಪಡುವಂತೆ 'ಪಿ' ಯನ್ನು ನಂಬಿದ್ದಾನೆ ಎಂದೂ ಹೇಳಬಹುದು.

ಒಂದು ಪ್ರತಿಪಾದನೆ ಸಮರ್ಥಿತವಾಗಿರುವುದು ಮತ್ತು ಸುಸಂಸ್ಥಾಪಿತವಾಗಿರುವುದರ ನಡುವಿನ ವ್ಯತ್ಯಾಸವನ್ನು, ವಿಶದೀಕರಿಸಲು ಜೋನನು ಗಂಭೀರವಾದ ಖಾಯಿಲೆಯೊಂದರಿಂದ ನರಳುತ್ತಿದ್ದಾನೆ ಎಂದು ಕಲ್ಪಿಸೋಣ. ಖಾಯಿಲೆ ತುಂಬಾ ಗಂಭೀರವಾಗಿದ್ದರೂ, ಆತ ಪೂರ್ಣವಾಗಿ ಚೇತರಿಸಿಕೊಳ್ಳುತ್ತಾನೆ ಎನ್ನುವುದಕ್ಕೆ ಪುರಾವೆಗಳಿವೆ. ಕ್ಷೇತ್ರದಲ್ಲಿ ಪರಿಣೀತರಾದ ಅವನ ವೈದ್ಯರು, ಅವನ ಪರಿಸ್ಥಿತಿಗೆ ಅತ್ಯಂತ ಪರಿಣಾಮಕಾರೀ ಚಿಕಿತ್ಸೆಗಳಿವೆ ಮತ್ತು ಚೇತರಿಕೆಯ ದರ ಸುಮಾರು ಪ್ರತಿಶತ 99 ರಷ್ಟಿದೆ ಎಂದು ತಿಳಿಸುತ್ತಾರೆ. ಜಾನನು ಸಹ ಚಿಕಿತ್ಸೆಯ ಪರಿಣಾಮದ ಬಗೆಗಿನ ಇದೇ ಮಾಹಿತಿಯನ್ನು ಅತಿ ಗೌರವಾನ್ವಿತವಾದ ವೈದ್ಯಕೀಯ ವಾರ್ತಾಪತ್ರದಲ್ಲಿಯೂ ಓದುತ್ತಾನೆ. ಈ ಪರಿಸ್ಥಿತಿಯಲ್ಲಿ ನಾವು, ಅವನು ಚೇತರಿಸಿ ಕೊಳ್ಳುತ್ತಾನೆ ಎನ್ನುವ ಪ್ರತಿಪಾದನೆ ಜಾನನಿಗೆ ಸಮರ್ಥಿತವಾಗುತ್ತದೆ. ಹಾಗಿದ್ದರೂ ಈ ಮಾಹಿತಿಯ ಸಾಕ್ಷ್ಯಗಳ ಆಧಾರದ ಮೇಲೆ ಜಾನನು ತಾನು ಚೇತರಿಸಿ ಕೊಳ್ಳುತ್ತೇನೆ ಎಂದು ನಂಬುವುದಿಲ್ಲ ಎಂದು ಭಾವಿಸೋಣ. ಬದಲಿಗೆ ಆತ ಬೇರಾವುದೋ ಕೆಟ್ಟ ಕಾರಣವನ್ನು ಆಧರಿಸಿ ತಾನು ಚೇತರಿಸಿ ಕೊಳ್ಳುತ್ತೇನೆ ಎಂದು ನಂಬಿ ಕೊಳ್ಳುತ್ತಾನೆ. ಅವನು ಯಾವುದೋ ಗಿಳಿ ಜ್ಯೋತಿಷಿ ನುಡಿದದ್ದರಿಂದ ಚೆತರಿಸಿಕೊಳ್ಳುತ್ತೇನೆ ಅಥವಾ ತನ್ನ ಇಚ್ಛಾ ಪೂರ್ವಕವಾದ ಚಿಂತನೆಗಳಿಂದ ಚೇತರಿಸಿ ಕೊಳ್ಳುತ್ತೇನೆ ಎಂದು ನಂಬುತ್ತಾನೆ ಎಂದು ಕೊಳ್ಳೋಣ. ಜಾನನಿಗೆ ನಂಬಲು ಅತ್ಯಂತ ಶ್ರೇಷ್ಠವಾದ ಕಾರಣಗಳಿದ್ದರೂ ಆತ ಆ ಆಧಾರಗಳ ಮೇಲೆ ನಂಬುವುದಿಲ್ಲ. ತಾನು ಚೇತರಿಸಿ ಕೊಳ್ಳುತ್ತೇನೆ ಎನ್ನುವ ಜಾನನ ನಂಬಿಕೆ ಸುಸಂಸ್ಥಾಪಿತವಲ್ಲ.

ತಾನು ಚೇತರಿಸಿ ಕೊಳ್ಳುತ್ತೇನೆ ಎನ್ನುವ ಜಾನನ ನಂಬಿಕೆ ಆ ಪ್ರತಿಪಾದನೆಯನ್ನು ನಂಬಲು ಇರುವ ಉತ್ತಮ ಸಾಕ್ಷ್ಯಗಳನ್ನು ಆಧರಿಸುವುದರ ಬದಲಾಗಿ ಇಚ್ಛಾಪೂರ್ಣ ಚಿಂತನೆ ಅಥವಾ ಗಿಳಿ ಭವಿಷ್ಯದವನ ಮಾತುಗಳ ರುಜುವಾತುಗಳ ಮೇಲೆ ಆಧಾರಿತವಾಗಿದ್ದರೆ ಜಾನನ ನಂಬಿಕೆ ಜ್ಞಾನವಲ್ಲ ಎಂದು ಚಿಂತಿಸುವುದು ನ್ಯಾಯಸಮ್ಮತವೆನಿಸುತ್ತದೆ .ಜ್ಞಾನ ಒಬ್ಬ ಸರಳವಾಗಿ ತನ್ನ ನಂಬಿಕೆಗೆ ತನ್ನ ಕಾರಣಗಳನ್ನು ಹೊಂದಿರುವುದರ ಅಗತ್ಯ ತಿಳಿಸದೇ ಆತನ ನಂಬಿಕೆಯು ಸಾಕ್ಷ್ಯಾಧಾರಗಳ ಮೇಲೆ ಆಧಾರಿತವಾಗಿರು ಅಗತ್ಯವನ್ನು ಸೂಚಿಸುತ್ತದೆ ಎಂದು ಚಿಂತಿಸ ಬಹುದು. ವ್ಯಕ್ತಿಯಲ್ಲಿ ಸುಸಂಸ್ಥಾಪಿತವಾದ ಪ್ರತಿಪಾದನೆಗಳ ಪರಿಕಲ್ಪನೆ ಕೊಟ್ಟ ಮೇಲೆ ಈ ವಿಭಿನ್ನತೆಯನ್ನು ಲೆಕ್ಕಕ್ಕೆ ತೆಗೆದು ಕೊಂಡು ನಾವು ಜ್ಞಾನಖಾತೆಯನ್ನು ಪರಿಷ್ಕರಿಸ ಬಹುದು.

ಡಿ3 'ಎಸ್'ಗೆ 'ಪಿ' = ಡಿಎಫ್. ನ ಜ್ಞಾನವಿದೆ.

(1) 'ಎಸ್'ಉ 'ಪಿ'ಯನ್ನು ನಂಬುತ್ತಾನೆ.

(2) 'ಪಿ' ಸತ್ಯವಾಗಿದೆ.

(3) 'ಎಸ್' ನಲ್ಲಿರುವ 'ಪಿ' ನಂಬಿಕೆ ಸುಸಂಸ್ಥಾಪಿತವಾಗಿದೆ.

ಈ ದೃಷ್ಟಿಯಲ್ಲಿ 'ಎಸ್' 'ಪಿ'ಯನ್ನು ತಿಳಿಯುವುದು ಕೇವಲ 'ಎಸ್' ಗೆ 'ಪಿ' ಸಮರ್ಥಿತವಾಗುವುದನ್ನು ಬಯಸುವುದಿಲ್ಲ. 'ಎಸ್' 'ಪಿ'ಯನ್ನು ಸಾಕ್ಷಿಗಳ ಆಧಾರದಲ್ಲಿ ನಂಬ ಬೇಕು ಎಂದು ಬಯಸುತ್ತದೆ. ಇಂತಹ ದೃಷ್ಟಿ ಕೋನ ನ್ಯಾಯ ಸಮ್ಮತ ಎನಿಸುತ್ತದೆ. ಒಂದು ನಂಬಿಕೆ ಸಮರ್ಥಿತವಾಗಿದೆ ಎನ್ನುವ ಬಗ್ಗೆ, ಯಾವಾಗಲೂ ಅಲ್ಲದಿದ್ದರೂ ಬಹು ಪಾಲು ಯಾವ ಮಟ್ಟದಲ್ಲಿ ಸಮರ್ಥಿತವಾಗಿದೆ ಎನ್ನುವುದು ಒಬ್ಬ ಹೊಂದಿರುವ ಸಾಕ್ಷಿಗಳ ಕಾರ್ಯವಾಗಿದೆ.

## ಸಮರ್ಥನೆ, ಸಾಕ್ಷ್ಯಾಧಾರ, ಸೋಲು

ಒಂದು ನಿರ್ದಿಷ್ಟ ಸಮಯದಲ್ಲಿ ಒಬ್ಬ ವ್ಯಕ್ತಿಯ ಸಾಕ್ಷ್ಯಾಧಾರಗಳು ಆ ಸಮಯದಲ್ಲಿ ಆತ ಹೊಂದಿರುವ ಎಲ್ಲ ಮಾಹಿತ ಅಥವಾ ದತ್ತಾಂಶಗಳಿಂದ ಕೂಡಿರುತ್ತದೆ ಎಂದು ಚಿಂತಿಸಬಹುದು. ಇಂದ್ರಿಯ ಗ್ರಹಿಕೆ, ಸ್ಮರಣೆ, ಅಂತರಾವಲೋಕನ, ಮತ್ತು ತರ್ಕ ಸಾಕ್ಷ್ಯಾಧಾರಗಳ ಪ್ರಮುಖ ಆಕರಗಳು ಎಂದು ವಿಸ್ತಾರವಾಗಿ ಮತ್ತು ಸಾಮಾನ್ಯವಾಗಿ ಪರಿಗಣಿಸಲಾಗುತ್ತದೆ. ನಾವು ನಮ್ಮ ನಂಬಿಕೆಗಳ ಕಾರಣಗಳಿಗೆ ಆಕರವಾದ ಈ ಮೂಲಗಳ ಬಗೆಗೆ ಚಿಂತಿಸ ಬಹುದು. ನಾವು ಅವುಗಳು ಸ್ಮೃತಿ ಅನುಭವ, ಇಂದ್ರಿಯಾನುಭವ, ಅಂತರಾವಲೋಕನಾನುಭವ, ಮತ್ತು ತಾರ್ಕಿಕ ಅಂತರ್ದೃಷ್ಟಿ (ಗಳಿಂದ ನಮಗೆ) ಇವೆಲ್ಲವೂ ನಮಗೆ ಸಾಕ್ಷ್ಯಾಧಾರಗಳನ್ನು ಒದಗಿಸುತ್ತವೆ ಎಂದು ನಾವು ಯೋಚಿಸಬಹುದು. ಇಂತಹ ಅನುಭವಗಳ ಜೊತೆಗೆ ನಮ್ಮ ನಂಬಿಕೆಗಳು ಸೇರಿ ನಮ್ಮ ಸಾಕ್ಷ್ಯಾಧಾರಗಳನ್ನು ರಚಿಸುತ್ತವೆ. ಹೀಗೆ ನನ್ನ ಮೇಜಿನ ಮೇಲೆ ಕಾಫಿಯ ಕಪ್ಪಿದೆ ಎನ್ನುವ ಸಾಕ್ಷಿಯು, ನಾನು ಕಣ್ಣಿನಿಂದ ಕಪ್ಪನ್ನು ನೋಡುವ ಇಂದ್ರಿಯಾನುಭವ ಮತ್ತು ಕಾಫಿಯನ್ನು ಮೂಸುವ ಇಂದ್ರಿಯಾನುಭವ, ಕಾಫಿಯನ್ನು ಮಾಡಿ ಕಪ್ಪಿನಲ್ಲಿ ಹಾಕಿ ಮೇಜಿನ ಮೇಲಿಟ್ಟ ನೆನಪಿನ ಅನುಭವ, ಮತ್ತು ನಾನು ದಿನದ ಈ ವೇಳೆಯಲ್ಲಿ ಬಹು ಮಟ್ಟಿಗೆ ಯಾವಾಗಲೂ ಒಂದು ಕಪ್ ಕಾಫಿಯನ್ನು ಮೇಜಿನ ಮೇಲೆ ಇರಿಸಿರುತ್ತೇನೆ ಎನ್ನುವ ನನ್ನ ಸಮರ್ಥಿತ ನಂಬಿಕೆ ನನ್ನ ಸಾಕ್ಷಿಗೆ ಕಾರಣವಾಗುತ್ತವೆ.

(ನಾವು ಎರಡು ತರದ ಸಾಕ್ಷಿಗಳನ್ನು ವರ್ಗೀಕರಿಸ ಬಹುದು.) ನಾವು ಸಾಕ್ಷಿಗಳನ್ನು ಎರಡು ರೀತಿಯಾಗಿ ಪ್ರತ್ಯೇಕಿಸಬಹುದು ನಿರ್ಣಾಯಕ ಮತ್ತು ಅನಿರ್ಣಾಯಕ. ನಿರ್ಣಾಯಕ ಸಾಕ್ಷ್ಯಾಧಾರಗಳು ಅವುಗಳು ಬೆಂಬಲಿಸುವ ಪ್ರತಿಪಾದನೆಗಳಿಗೆ ಸತ್ಯದ ಭರವಸೆ ನೀಡುತ್ತವೆ. 'ಇ' ಎನ್ನುವುದು 'ಪಿ' ಎನ್ನುವ ಪ್ರತಿಪಾದನೆಗೆ ನಿರ್ಣಾಯಕ ಸಾಕ್ಷ್ಯಾಧಾರವಾಗಿದ್ದರೆ, 'ಇ' ಯನ್ನು ಕೊಟ್ಟಾಗ 'ಪಿ' ಅಸತ್ಯವಾಗುವುದು ಅಸಾಧ್ಯ.

ಪ್ರಾಯಶಃ ನಾವು 'ನಾನು ಯೋಚಿಸುತ್ತೇನೆ' ಎನ್ನುವ ಪ್ರತಿಪಾದನೆಯನ್ನು ಪರಿಗಣಿಸುವ ಮೂಲಕ ನಿರ್ಣಾಯಕ ಸಾಕ್ಷಿಯ ಪರಿಕಲ್ಪನೆಯನ್ನು ಉದಾಹರಿಸಬಹುದು. ನಾವು ಆತ್ಮಶೋಧನೆಯ ಮೂಲಕ ನಾವು ಯೋಚಿಸುತ್ತೇವೆ, ಎನ್ನುವ ಅರಿವನ್ನು ಹೊಂದಿದ್ದೇವೆ. ನಾನು ಯೋಚಿಸುತ್ತೇನೆ ಎನ್ನುವ ಪ್ರತಿಪಾದನೆಗೆ ನಾನು ಯೋಚಿಸುತ್ತೇನೆ ಎನ್ನುವ ಆತ್ಮಶೋಧನಾತ್ಮಕ ಅರಿವೇ ಸಾಕ್ಷ್ಯಾಧಾರ. ಅದು ನಿರ್ಣಾಯಕ ಸಾಕ್ಷ್ಯಾಧಾರ ಕೂಡ. ನಾನು ಚಿಂತಿಸುತ್ತಿದ್ದೇನೆ ಎನ್ನುವ ಆತ್ಮಶೋಧನಾತ್ಮಕ ಅರಿವು ಇರುವ ವರೆಗೆ ನಾನು ಚಿಂತಿಸುತ್ತಿದ್ದೇನೆ ಎನ್ನುವ ಪ್ರತಿಪಾದನೆ ಅಸತ್ಯವಾಗಲು ಸಾಧ್ಯವಿಲ್ಲ.

ಹಾಗೆಯೇ ನಾನು ಚಿಂತಿಸುತ್ತಿದ್ದೇನೆ ಎನ್ನುವ ಆತ್ಮಶೋಧನಾತ್ಮಕ ಅರಿವೇ ನಾನು ಅಸ್ತಿತ್ವದಲ್ಲಿದ್ದೇನೆ ಎನ್ನುವ ಪ್ರತಿಪಾದನೆಗೆ ನಿರ್ಣಾಯಕ ಸಾಕ್ಷ್ಯಾಧಾರ. ನಾನು

ಯೋಚಿಸುತ್ತಿದ್ದೇನೆ ಎನ್ನುವ ನನ್ನ ಆತ್ಮಶೋಧನಾತ್ಮಕ ಅರಿವಿರುವ ವರೆಗೆ ನಾವು ಅಸ್ತಿತ್ವದಲ್ಲಿದ್ದೇನೆ ಎನ್ನುವುದು ಅಸತ್ಯವಾಗುವುದು ಅಸಾಧ್ಯ.

ಅನೇಕ ಸಾರಿ ಪ್ರತಿಪಾದನೆಗಿರುವ ನಮ್ಮ ಸಾಕ್ಷ್ಯಗಳು ಅನಿರ್ಣಾಯಕವಾಗಿರುತ್ತವೆ. ತಾವು ಬೆಂಬಲಿಸುವ ಪ್ರತಿಪಾದನೆಗಳ ಸತ್ಯತೆಯ ಬಗ್ಗೆ ಭರವಸೆ ನೀಡುವುದಿಲ್ಲ ಎನ್ನುವ ಅರ್ಥದಲ್ಲಿ ಅವು ಅನಿರ್ಣಾಯಕವಾಗಿರುತ್ತವೆ. ನನಗೆ ಒಂದು ತಂಬಿಗೆಯಲ್ಲಿ 100 ಗೋಲಿಗಳಿವೆ ಮತ್ತು ಅದರಲ್ಲಿ 95 ಕಪ್ಪಾಗಿವೆ ಎಂದು ತಿಳಿದಿದೆ ಎಂದು ಊಹಿಸೋಣ. ನಾನು ಒಂದು ಕಪ್ಪು ಗೋಲಿಯನ್ನು ಹೆಕ್ಕ ಬಹುದು ಎಂಬ ಪ್ರತಿಪಾದನೆಯನ್ನು ಈ ಸಾಕ್ಷಿ ಬೆಂಬಲಿಸಿದರೂ, ಅದು ಅದರ ಬಗ್ಗೆ ಭರವಸೆ ನೀಡುವುದಿಲ್ಲ. ನನ್ನ ಸಾಕ್ಷ್ಯ ಅನಿರ್ಣಾಯಕವಾದದ್ದು. ಹಿಂದಿನ ಉದಾಹರಣೆಯೊಂದನ್ನು ಸ್ಮರಿಸೋಣ. ನಾನು ಗಡಿಯಾರವನ್ನು ನೋಡುತ್ತೇನೆ ಮತ್ತು ಅದು ಮಧ್ಯಾಹ್ನ ಎನ್ನುತ್ತದೆ. ನನ್ನ ಗಡಿಯಾರ ಅತ್ಯಂತ ವಿಶ್ವಾಸನೀಯವಾಗಿದ್ದುದರಿಂದ ಈಗ ಸರಿ ಸುಮಾರು ಅಪರಾಹ್ನದ ವೇಳೆ ಎಂಬ ನನ್ನ ನಂಬಿಕೆಯು ಸಮರ್ಥನೀಯವಾದದ್ದು , ಆದರೆ ನನಗೆ ಅರಿವಿಲ್ಲದೆಯೇ ಗಡಿಯಾರವು ಮಧ್ಯಾಹ್ನಕ್ಕೆ ನಿಂತು ಹೋಗಿ ಈಗ ಸಮಯ 12.30 ಎಂದಾದಾಗ, ಆಗ ನನ್ನ ಸಾಕ್ಷ್ಯ ಅನಿರ್ಣಾಯಕ

(ಈ ಹಿಂದೆ ನನ್ನ ಗಡಿಯಾರ ಅತ್ಯಂತ ವಿಶ್ವಸನೀಯವಾಗಿತ್ತು ಮತ್ತು ಅದು ಸರಿ ಸುಮಾರು ಅಪರಾಹ್ನ ಎನ್ನುವ ಸಾಕ್ಷ್ಯದ ಆಧಾರದ ಮೇಲೆ ನಾನು ಅದು ಮಧ್ಯಾಹ್ನ ಎನ್ನುವುದರಲ್ಲಿ ಸಮರ್ಥಿಸಲ್ಪಟ್ಟಿದ್ದೇನೆ. ಆದರೆ ನನ್ನ ತಿಳುವಳಿಕೆಗೆ ಬರದಂತೆ ನನ್ನ ಗಡಿಯಾರ ಕೆಲಸವನ್ನು ನಿಲ್ಲಿಸಿದೆ ಮತ್ತು ಈಗ 12:30 ಆಗಿ ಹೋಗಿದೆ ಎಂದು ಕಲ್ಪಿಸಿದರೆ ಅದು ಮಧ್ಯಾಹ್ನ ಎನ್ನುವುದಕ್ಕೆ ನನ್ನ ಸಾಕ್ಷ್ಯ ಅನಿರ್ಣಾಯಕ.) ನನ್ನ ಸಾಕ್ಷ್ಯ ಅದು ಮಧ್ಯಾಹ್ನ ಎನ್ನುವುದನ್ನು ಬೆಂಬಲಿಸುತ್ತದೆ ಆದರೆ ಅದು ಭರವಸೆ ನೀಡುವುದಿಲ್ಲ.

ವಸ್ತುಗಳ ಅಸ್ತಿತ್ವದ ಬಗೆಗೆ ನಮ್ಮ ಇಂದ್ರಿಯಗಳು ನೀಡುವ ಸಾಕ್ಷ್ಯಗಳು ಅನಿರ್ಣಾಯಕ ಸಾಕ್ಷ್ಯಾಧಾರಗಳಾಗಿರುತ್ತವೆ. ಡೆಕಾರ್ಟೆ ಪ್ರಸಿದ್ಧವಾಗಿ ತಿಳಿಸಿದಂತೆ ನನ್ನ ಇಂದ್ರಿಯಾನುಭವಗಳು ದ್ರವ್ಯವಸ್ತುಗಳಿಂದ ಉಂಟಾಗದೆ, ಯಾವುದೋ ಅತಿಮಾನುಷ ದುಷ್ಟ ಶಕ್ತಿಯು ಮೋಸ ಮಾಡುವ ಉದ್ದೇಶದಿಂದಾಗಿರುವ ಸಾಧ್ಯಾತೆಗಳಿವೆ (ಯಾವುದೋ ನಮ್ಮನ್ನು ಮೋಸ ಮಾಡಬೇಕೆಂಬ ಉದ್ದೇಶಗಳನ್ನು ಇಟ್ಟು ಕೊಂಡ ಶಕ್ತಿಶಾಲಿ ಕೆಟ್ಟ ಪಿಶಾಚಿಯಿಂದ ಆಗಿರುವ ಸಾಧ್ಯತೆಗಳಿವೆ.) ಹೀಗೆ ನನಗೆ ಮಂಜು ಗೆಡ್ಡೆಯೊಂದನ್ನು ಕೈಯಲ್ಲಿ ಹಿಡಿದ ಇಂದ್ರಿಯಾನುಭವ ಆಗುತ್ತಿದ್ದರೂ ಆ ಸಾಕ್ಷ್ಯ ನನ್ನ ಕೈಯಲ್ಲಿ ಮಂಜು ಗಡ್ಡೆಯಿದೆ ಎನ್ನುವುದಕ್ಕೆ ಭರವಸೆ ಕೊಡಲಾರದು. ತಾರ್ಕಿಕವಾಗಿ ನನಗೆ ಆ ಅನುಭವ ಆಗುತ್ತಿದ್ದರೂ ನನ್ನ ಕೈಯಲ್ಲಿ ಮಂಜು ಗಡ್ಡೆ ಇಲ್ಲದಿರುವ ಸಾಧ್ಯತೆಯಿದೆ.

"ಅನಿರ್ಣಾಯಕ ಸಾಕ್ಷ್ಯಾಧಾರ" ಎನ್ನುವ ಪದ ತಪ್ಪು ದಾರಿಗೆಳೆಯ ಬಹುದು. 'ಇ'ಯು 'ಪಿ' ಎನ್ನುವ ಪ್ರತಿಪಾದನೆಗೆ ಅನಿರ್ಣಾಯಕ ಸಾಕ್ಷ್ಯ ಎಂದರೆ 'ಪಿ' ಎಂದು ನಿರ್ಣಯಿಸಲು 'ಇ' ತಾರ್ಕಿಕವಾಗಿಲ್ಲ ಎಂದು ಹೇಳಿದಂತಲ್ಲ. ಉದಾರಹರಣೆಗೆ, ನನಗೆ ನೂರರಲ್ಲಿ ತೊಂಭತ್ತೊಂದು ಗೋಲಿಗಳು ಕಪ್ಪಾಗಿವೆ ಎಂದು ಅರಿವಿರುವಾಗ ನಾನು ಒಂದು ಕಪ್ಪು ಗೋಲಿಯನ್ನೇ ಹೆಕ್ಕಬಹುದು ಎಂದು ಒಪ್ಪಿಕೊಳ್ಳುವುದು ಅಥವಾ ನಂಬುವುದು, ಅಥವಾ ನಿರ್ಣಯಿಸುವುದು ತಾರ್ಕಿಕವಾಗಿಯೇ ಇದೆ. ಆದುದರಿಂದ ಒಂದು ಸಾಕ್ಷ್ಯ ಅನಿರ್ಣಾಯಕವಾಗಿದೆ ಎಂದರೆ ಅದು ಒಂದು ನಿರ್ದಿಷ್ಟ ನಿರ್ಣಯವನ್ನು ಬೆಂಬಲಿಸುವುದಿಲ್ಲ ಎನ್ನುವುದಲ್ಲ, ಆದರೆ ಅದು ಆ ನಿರ್ಣಯಕ್ಕೆ ಭರವಸೆ ಕೊಡುವುದಿಲ್ಲ ಎನ್ನುವ ಅರ್ಥ. ಮುಂದುವರೆದು ನಾವು ಮಥಿಯಾಸ್ ಸ್ಟಿಯಪ್ ಸೂಚಿಸುವಂತೆ

‘ಅನಿರ್ಣಾಯಕ’ ಸಾಕ್ಷ್ಯಗಳನ್ನು ನಿರ್ಣಾಯಕೇತರ ಸಾಕ್ಷ್ಯಗಳೆಂದು ಗೊಂದಲಗೊಳ್ಳಬಾರದು.[6] ‘ಪಿ’ ಎನ್ನುವ ಪ್ರತಿಪಾದನೆಯೊಂದಿಗೆ ‘ಇ’ ಎನ್ನುವ ಸಾಕ್ಷಂ್ಯ ವಸ್ತು ಅನಿರ್ಣಾಯಕವಾಗಿದೆ ಎಂದರೆ ‘ಇ’ಯು ‘ಪಿ’ ಯನ್ನು ಬೆಂಬಲಿಸುತ್ತದೆ ಆದರೆ ಖಚಿತಪಡಿಸುವುದಿಲ್ಲ ಎಂದು ಹೇಳಿದಂತೆ. ವ್ಯತಿರಿಕ್ತವಾಗಿ ಸಾಕ್ಷ್ಯವಸ್ತು ‘ಇ’ಯು ‘ಪಿ’ ಗೆ ನಿರ್ಣಾಯಕೇತರವಾಗಿದೆ ಎಂದರೆ ಅದು ‘ಪಿ’ ಯನ್ನು ನಂಬುವುದನ್ನು ಬೆಂಬಲಿಸುವುದಿಲ್ಲ ಎಂದು. ನಮ್ಮ ಹಿಂದಿನ ಉದಾಹರಣೆಗಳಲ್ಲಿ, ಅದು ಮಧ್ಯಾಹ್ನ ಎಂದಾಗಲಿ, ನಾನು ಒಂದು ಕಪ್ಪು ಗೋಲಿಯನ್ನು ಹೆಕ್ಕುತ್ತೇನೆ ಎಂದಾಗಲೀ ನನ್ನ ಸಾಕ್ಷ್ಯಗಳು ಬೆಂಬಲಿಸುತ್ತವೆ. ಆ ಪ್ರತಿಪಾದನೆಗಳಿಗೆ ನನ್ನ ಸಾಕ್ಷ್ಯಗಳು ನಿರ್ಣಾಯಕೇತರವಲ್ಲ.

ಸಾಕ್ಷ್ಯಗಳು ಮತ್ತು ಸಮರ್ಥಿತ ನಂಬಿಕೆಗಳಿಗೆ ಸಂಪರ್ಕವಿದೆ ಎಂದಾದುದರಿಂದ ವ್ಯಕ್ತಿ ಒಂದು ಪ್ರತಿಪಾದನೆಗೆ ಸಾಕ್ಷ್ಯಗಳಿದ್ದರೆ ಅದನ್ನು ನಂಬುವುದರಲ್ಲಿ ಸಮರ್ಥಿಸಲ್ಪಟ್ಟಿದ್ದಾನೆ ಎಂದು ನಾವು ಸರಳವಾಗಿ ಭಾವಿಸ ಬಹುದೇ? ಇಲ್ಲ. ಒಬ್ಬನ ಬಳಿ ‘ಪಿ’ ಯನ್ನು ನಂಬಲು ಸಾಕ್ಷ್ಯಗಳಿವೆ ‘ಪಿ’ ಯ ನೇತಿಯನ್ನು ನಂಬಲು ಸಮಾನವಾದ ಒಳ್ಳೆಯ ಸಾಕ್ಷ್ಯಗಳಿವೆ ಎಂದುಕೊಳ್ಳೋಣ. ವ್ಯಕ್ತಿಯ ಬಳಿ ಇರುವ ಸಾಕ್ಷ್ಯಗಳು ಇಷ್ಟೇ ಆದರೆ ಆಗ ಅವನು ಜ್ಞಾನಾತ್ಮಕವಾಗಿ ಆ ನಂಬಿಕೆ ‘ಪಿ’ ಯನ್ನು ಅಮಾನತ್ತಿನಲ್ಲಿಡುವುದರಲ್ಲಿ ಸಮರ್ಥಿತನಾಗುತ್ತಾನೆ. ಒಬ್ಬ ‘ಪಿ’ ಯನ್ನು ನಂಬುವುದರಲ್ಲಿ ಸಮರ್ಥಿತನೇ ಎನ್ನುವುದು ಅವನಲ್ಲಿರುವ ಒಟ್ಟು ಮೊತ್ತದ ಸಾಕ್ಷ್ಯಗಳ ಮೇಲೆ ಆಧಾರಿತವಾಗುತ್ತದೆ. ವ್ಯಕ್ತಿಯ ಶಿಲ್ಕಿನಲ್ಲಿರುವ ಒಟ್ಟು ಮೊತ್ತದ ಸಾಕ್ಷ್ಯಗಳು ‘ಪಿ’ ಯನ್ನು ಬೆಂಬಲಿಸಿದರೆ ವ್ಯಕ್ತಿ ‘ಪಿ’ ಯನ್ನು ನಂಬುವುದರಲ್ಲಿ ಸಮರ್ಥಿತನಾಗುತ್ತಾನೆ ಎನ್ನುವುದು ಹೆಚ್ಚು ಸಮಂಜಸವಾಗಿ ಕಾಣುತ್ತದೆ.

ಮೇಲ್ಕಾಣಿಸಿದಂತೆ ವಿವಿಧ ಪ್ರತಿಪಾದನೆಗಳನ್ನು ನಂಬುವಲ್ಲಿ ಒಬ್ಬನ ಸಮರ್ಥನೆಗಳು ಕಾಲಾನುಗುಣವಾಗಿ ಆತ ಹೆಚ್ಚು ಹೆಚ್ಚು ಮಾಹಿತಿ ಸಂಗ್ರಹಿಸಿದಂತೆ ಬದಲಾಗ ಬಹುದು. ಕೆಲವು ಸಾರಿ ಒಂದು ಪ್ರತಿಪಾದನೆಯ ಬಗೆಗಿನ ನಮ್ಮ ಸಾಕ್ಷ್ಯಗಳು ‘ಮೇಲ್ಸವಾರಿ’ ಮಾಡಲ್ಪಡಬಹುದು ಅಥವಾ ‘ಸೋಲ’ ಬಹುದು. ನಮ್ಮ ಸಾಕ್ಷ್ಯಗಳು ಮೇಲ್ಸವಾರಿಯಾದಾಗ ಅಥವಾ ಸೋತಾಗ ನಾವು ನಮ್ಮ ನಂಬಿಕೆಯ ಸಮರ್ಥನೆಗಳನ್ನು ಕಳೆದುಕೊಳ್ಳಬಹುದು. ನಾವು “ಸಾಕ್ಷ್ಯದ ಸೋಲನ್ನು” ಈ ಕೆಳ ಕಂಡಂತೆ ವ್ಯಾಖ್ಯಾನಿಸೋಣ:

ಡಿ4 ಡಿ - ಪಿ = ಡಿ ಎಫ್ ಗೆ ಇರುವ ಇ ಎನ್ನುವ ಸಾಕ್ಷ್ಯವನ್ನು ಸೋಲಿಸುತ್ತದೆ. ‘ಇ’ಯು ‘ಪಿ’ ಯನ್ನು ನಂಬಲು ಇರುವ ಸಾಕ್ಷಂ್ಯವಾಗಿದೆ, ಅದರೆ ‘ಇ’ ಮತ್ತು ‘ಡಿ’ಯು ‘ಪಿ’ಯನ್ನು ನಂಬಲು ಇರುವ ಸಾಕ್ಷ್ಯಗಳಲ್ಲ.

ನಾವು ಸೋಲಿನ ಪರಿಕಲ್ಪನೆಯನ್ನು ವಿಶದೀಕರಿಸುವ ಎರಡು ಉದಾಹರಣೆಗಳನ್ನು ನೋಡೋಣ. ಯಾವುದೋ ಒಂದು ಮೇಜು ನಿಮಗೆ ಕೆಂಪಾಗಿ ಕಾಣುತ್ತಿದೆ ಎಂದಿಟ್ಟು ಕೊಳ್ಳೋಣ. ಸಾಕ್ಷ್ಯದ ಈ ತುಣುಕನ್ನು ‘ಎ’ ಎಂದು ಕರೆಯೋಣ. ಈಗ ಮೇಜು ಕೆಂಪಾಗಿದೆ ಎನ್ನುವ ಪ್ರತಿಪಾದನೆಯನ್ನು ಪರಿಗಣಿಸೋಣ. ಈ ಪ್ರತಿಪಾದನೆಯನ್ನು ‘ಬಿ’ ಎಂದು ಕರೆಯೋಣ. ನಾವು ‘ಎ’ ಯು ‘ಬಿ’ ಗೆ ಸಾಕ್ಷ್ಯ ಎನ್ನಬಹುದು. ನಿಮಗೆ ಮೇಜು ಕೆಂಪಾಗಿ ಕಾಣುತ್ತಿರುವುದು ಮೇಜು ಕೆಂಪಾಗಿದೆ ಎನ್ನುವ ಪ್ರತಿಪಾದನೆಗೆ ಬೆಂಬಲ ಒದಗಿಸುತ್ತಿದೆ ಎನ್ನ ಬಹುದು. ಈಗ ನಿಮಗೆ ಸ್ವಲ್ಪ ಹೆಚ್ಚುವರಿ ಮಾಹಿತಿ ಸಿಗುತ್ತದೆ ಎಂದು ಕೊಳ್ಳೋಣ. ಮೇಜಿನ ಮೇಲೆ ಕೆಂಪು ಬೆಳಕು ಚಲ್ಲಿರುವುದೆಂದು ನಿಮಗೆ ತಿಳಿಯುತ್ತದೆ ಎಂದು ಭಾವಿಸೋಣ. (ಮೇಜಿನ ಮೇಲೆ ಒಂದು ಕೆಂಪು ದೀಪ ಬೆಳಗುತ್ತಿದೆ ಎಂದು ತಿಳಿದುಕೊಳ್ಳುತ್ತಿರಿ ಎಂದು ಭಾವಿಸೋಣ.) ಈ ಹೆಚ್ಚುವರಿ ಮಾಹಿತಿಯನ್ನು ‘ಸಿ’ ಎಂದು ಕರೆಯೋಣ. ‘ಎ’ ಮತ್ತು ‘ಸಿ’ ‘ಬಿ’ ಗೆ ಸಾಕ್ಷ್ಯಗಳಲ್ಲ ಎನ್ನುವುದನ್ನು ಗಮನಿಸಿ. ಈಗ ‘ಸಿ’ ‘ಬಿ’ಗೆ ಸಾಕ್ಷ್ಯವಾಗಿ ‘ಎ’ ಯ ಮೇಲ್ಸವಾರಿ ಮಾಡುತ್ತದೆ ಅಥವಾ ಸೋಲಿಸುತ್ತದೆ. ಸ್ವಲ್ಪ ಸಡಿಲವಾಗಿ ಹೇಳುವುದಾದರೆ, ಮೇಜಿನ ಬಗೆಗೆ ನಿಮ್ಮ ಮಾಹಿತಿ ಕೇವಲ ‘ಎ’ ಮತ್ತು ‘ಸಿ’ ಆಗಿದ್ದರೆ ನೀವು ‘ಬಿ’ ಯನ್ನು ಇನ್ನು ಮುಂದೆ

ನಂಬುವುದರಲ್ಲಿ ಸಮರ್ಥಿಸಲ್ಪಡುವುದಿಲ್ಲ. ಮತ್ತೊಮ್ಮೆ, ನಾವು ಒಬ್ಬ ಒಂದು ಪ್ರತಿಪಾದನೆಗೆ ಯಾವುದೋ ಸಾಕ್ಷ್ಯ ಹೊಂದಿದ್ದಾನೆ ಎಂದ ಕೂಡಲೇ ಆತ ಅದನ್ನು ನಂಬುವುದರಲ್ಲಿ ಸಮರ್ಥಿತನಾಗಿದ್ದಾನೆ ಎಂದು ಸರಳವಾಗಿ ಹೇಳಲಾಗುವುದಿಲ್ಲ. ಒಬ್ಬ ಹೊಂದಿರುವ ಸಾಕ್ಷ್ಯ ಒಬ್ಬ ಪಡೆಯ ಬಹುದಾದ ಇನ್ನೊಂದು ಸಾಕ್ಷ್ಯದಿಂದ ಸೋಲಿಸಲ್ಪಡಬಹುದು.

ನಾವು ಸೋಲಿನ ಎರಡನೆಯ ಉದಾಹರಣೆಯನ್ನು ಪರಿಗಣಿಸೋಣ.[7] ನೀವು ಒಂದು ಕೂಟಕ್ಕೆ ಹೋಗುತ್ತೀರಿ ಮತ್ತು (ಎಚ್) ಕೊಠಡಿಯಲ್ಲಿರುವ ಬಹಳ ಜನ ಡೆಮೋಕ್ರಾಟುಗಳಾಗಿದ್ದಾರೆ. ಜಾನ್ ಕೂಡಾ ಕೊಠಡಿಯಲ್ಲಿದ್ದಾನೆ. ನಾವು (ಎಚ್) ಜಾನ್ ಒಬ್ಬ ಡೆಮೋಕ್ರಾಟ್ (ಐ) ಎನ್ನುವುದಕ್ಕೆ ಸಾಕ್ಷ್ಯವಾಗಿದೆ ಎನ್ನ ಬಹುದು. ಆದರೆ ಕೊಠಡಿಯ ಬಲ ಭಾಗದಲ್ಲಿರುವು ಬಹಳ ಜನ ಡೆಮೋಕ್ರಾಟರಲ್ಲ ಮತ್ತು ಜಾನ್ ಬಲ ಭಾಗದಲ್ಲಿದ್ದಾನೆ ಎಂದಾದರೆ, ನಾವು (ಎಚ್) (ಐ) ಜಾನ್ ಒಬ್ಬ ಡೆಮೋಕ್ರಾಟ್ ಎನ್ನುವುದಕ್ಕೆ ಸಾಕ್ಷ್ಯವಾಗಿದೆ. ನಾವು ಈಗ (ಜೆ) ಬಲಭಾಗದಲ್ಲಿರುವ ಬಹಳ ಜನ ಡೆಮೋಕ್ರಾಟರಲ್ಲ ಮತ್ತು ಜಾನ್ ಕೊಠಡಿಯ ಬಲಭಾಗದಲ್ಲಿದ್ದಾನೆ ಎನ್ನುವುದನ್ನು ತಿಳಿದು ಕೊಳ್ಳುತ್ತೇವೆ. (ಎಚ್) (ಐ) ಗೆ ಸಾಕ್ಷ್ಯವಾದರೂ (ಎಚ್ ಮತ್ತು ಜೆ) (ಐ)ಗೆ ಸಾಕ್ಷ್ಯವಲ್ಲ. ಇಲ್ಲಿ (ಜೆ) (ಐ) ಗೆ ಸಾಕ್ಷ್ಯವಾಗಿ (ಎಚ್) ನ್ನು ಸೋಲಿಸುತ್ತದೆ.

ಸೋಲುಗಳೇ ಸೋಲಿಸಲ್ಪಡಬಹುದು ಎನ್ನುವುದು ಗಮನಿಸಬೇಕಾದ ವಿಷಯ. ಮತ್ತೊಮ್ಮೆ ಹಿಂದಿನ ಉದಾಹರಣೆಯನ್ನು ಪರಗಣಿಸೋಣ. ಮುಂಚಿನ 'ಎಚ್' ಮತ್ತು 'ಐ' ಸಾಕ್ಷ್ಯಗಳ ಜೊತೆಗೆ ನೀವು ಕೊಠಡಿಯಲ್ಲಿರುವ ಐವತ್ತರಲ್ಲಿ ನಲವತ್ತೊಂಭತ್ತು ಜನ ಡೆಮೋಕ್ರಾಟರು ವ್ಯಾಪಾರ ಶಾಸನ ಬಿಲ್ಲಿಗೆ ಮತ ಛಲಾಯಿಸಿದ್ದಾರೆ ಮತ್ತು ಜಾನ್ ಕೂಡಾ ವ್ಯಾಪಾರ ಬಿಲ್ಲಿಗೆ ಮತ ಚಲಾಯಿಸಿದ್ದಾನೆ ಎನ್ನುವ (ಕೆ) ಯನ್ನು ತಿಳಿದು ಕೊಂಡಿರಿ ಎಂದು ಭಾವಿಸೋಣ. (ಎಚ್) ಮತ್ತು (ಜೆ) (ಐ) ಯನ್ನು ನಂಬಲು ಸಾಕ್ಷ್ಯಗಳಲ್ಲದಿದ್ದರೂ, (ಎಚ್) ಮತ್ತು (ಜೆ) ಮತ್ತು (ಕೆ) ಗಳು (ಐ)ಯನ್ನು ನಂಬಲು ಸಾಕ್ಷ್ಯಗಳಾಗುತ್ತವೆ. ಆದುದರಿಂದ ಸಾಕ್ಷ್ಯಗಳ ಸೋಲಿನ ಪರಿಕಲ್ಪನೆಯ ಜೊತೆಗೆ ನಾವು,

ಡಿ5 ಎಕ್ಸ್ ಡಿಯನ್ನು ಪಿ=ಡಿ ಎಫ್ ಗೆ ಸಾಕ್ಷ್ಯ ಇ ಯನ್ನು ಸೋಲಿಸಿದ್ದಾಗಿರುತ್ತದೆ.

(i)'ಇ' ಯು 'ಪಿ' ಯನ್ನು ನಂಬಲು ಸಾಕ್ಷ್ಯವಾಗಿದೆ.
(ii)'ಇ' ಮತ್ತು'ಡಿ' 'ಪಿ'ಯನ್ನು ನಂಬಲು ಸಾಕ್ಷ್ಯಗಳಲ್ಲ. ಮತ್ತು
(iii)'ಇ'ಮತ್ತು'ಡಿ' ಮತ್ತು 'ಎಕ್ಸ್' 'ಪಿ'ಯನ್ನು ನಂಬಲು ಸಾಕ್ಷ್ಯಗಳಾಗಿವೆ, ಎಂದು ಸೇರಿಸಬಹುದು.

ಮತ್ತೊಮ್ಮೆ, ಒಬ್ಬ ತನ್ನ ಬೇರೆ ಮಾಹಿತಿಗಳಿಂದ ಸೋಲಿಸಲ್ಪಟ್ಟ ಒಂದು ಪ್ರತಿಪಾದನೆಯನ್ನು ನಂಬಲು ಕೆಲವು ಸಾಕ್ಷ್ಯಗಳನ್ನು ಹೊಂದ ಬಹುದಾದುದರಿಂದ ಒಬ್ಬ ಒಂದು ಪ್ರತಿಪಾದನೆಯನ್ನು ನಂಬಲು ತನ್ನ ಒಟ್ಟು ಮೊತ್ತದ ಸಾಕ್ಷ್ಯಗಳನ್ನು ಆಧರಿಸಿ ಸಮರ್ಥಿತನಾಗುತ್ತಾನೆಯೇ, ಎನ್ನುವುದನ್ನು ಚಿಂತಿಸಬೇಕು. ಒಬ್ಬ ಒಂದು ಪ್ರತಿಪಾದನೆ 'ಪಿ'ಗೆ, ಸಾಕ್ಷ್ಯಗಳನ್ನು ಹೊಂದಿದ್ದು, ಆತನ ಒಟ್ಟು ಮೊತ್ತದ ಸಾಕ್ಷ್ಯಗಳಲ್ಲಿ ಯಾವುದೂ ಆತನ 'ಪಿ' ಪ್ರತಿಪಾದನೆಯ ಸಾಕ್ಷ್ಯವನ್ನು ಸೋಲಿಸುವುದಿಲ್ಲ ಎಂದಾದರೆ 'ಪಿ' ಯು ಆತನಿಗೆ ಸಮರ್ಥಿತವಾಗಿದೆ, ಎನ್ನುವುದು ಹೆಚ್ಚು ಭರವಸೆ ನೀಡುವ ದೃಷ್ಟಿಯಾಗಿ ಕಾಣುತ್ತದೆ.

ಸಾಕ್ಷ್ಯಗಳು ಸೋಲಿಸಲ್ಪಡುತ್ತವೆ ಅಥವಾ ಮೇಲ್ಸವಾರಿ ಮಾಡಲ್ಪಡುತ್ತವೆ ಎನ್ನುವುದಕ್ಕೆ ನೀತಿ ಶಾಸ್ತ್ರದಲ್ಲಿ ಒಂದು ದೃಷ್ಟಾಂತವಿದೆ. ಕೆಲವು ಬಾರಿ ಸಂದರ್ಭದ ಒಂದು ಚಹರೆ ಒಬ್ಬ ಒಂದು ನಿರ್ದಿಷ್ಟ ರೀತಿಯಲ್ಲಿ ಕಾರ್ಯ ನಿರ್ವಹಿಸುವುದನ್ನು ಬಯಸುತ್ತದೆ ಮತ್ತು ಸಂದರ್ಭದ ಕೆಲ ಬೇರೆ ಚಹರೆಗಳು ಅವನು ಹಾಗೆ ಕಾರ್ಯನಿರ್ವಹಿಸದಿರುವುದನ್ನು

ಬಯಸುತ್ತವೆ. ಉದಾಹರಣೆಗೆ ಜಾನನು ತನ್ನ ಸ್ನೇಹಿತ ಸ್ಮಿಥ್‌ನನ್ನು ಮಧ್ಯಾಹ್ನ ಭೋಜನದ ಸಮಯ ಭೇಟಿಯಾಗುತ್ತೇನೆ ಎಂದು ಮಾತು ಕೊಟ್ಟಿದ್ದಾನೆ ಎಂದು ಭಾವಿಸೋಣ. ಅವನು ಭಾಷೆ ಕೊಟ್ಟಿದ್ದಾನೆ ಎನ್ನುವ ಸತ್ಯ ಅವನು ಸ್ಮಿಥ್ ನನ್ನು ಮಧ್ಯಾಹ್ನ ಭೇಟಿ ಮಾಡ ಬೇಕೆಂದು ನಿರೀಕ್ಷಿಸುತ್ತದೆ. ಈಗ ಜಾನನು ಸ್ಮಿಥ್ ನನ್ನು ಭೇಟಿಯಾಗಲು ಭಾಷೆ ಕೊಟ್ಟಿದ್ದನ್ನು 'ಪಿ' = ಎಂದೂ ಜಾನನು ಸ್ಮಿಥ್ ನನ್ನು ಭೇಟಿ ಮಾಡುವುದನ್ನು 'ಕ್ಯೂ'=ಎಂತಲೂ ಸಂಕೇತಿಸೋಣ. ಆಗ 'ಪಿ'ಯು 'ಕ್ಯು' ವನ್ನು ಬಯಸುತ್ತದೆ ಎನ್ನಬಹುದು. ಸ್ಮಿಥ್ ನನ್ನು ಭೇಟಿ ಮಾಡಲು ಬರುವ ವೇಳೆಯಲ್ಲಿ ಜಾನ್ ಒಂದು ವಾಹನಾಪಘಾತದಲ್ಲಿ ಗಂಭೀರವಾಗಿ ಗಾಯಗೊಂಡಿರುವ ಬ್ರೌನನನ್ನು ಸಂಧಿಸುತ್ತಾನೆ ಎಂದಿಟ್ಟುಕೊಳ್ಳೋಣ. ಗಂಭೀರವಾಗಿ ಗಾಯಗೊಂಡ ಬ್ರೌನನಿಗೆ ಸಹಾಯ ಮಾಡಲು ಕೇವಲ ಜಾನನೊಬ್ಬನೇ ಇದ್ದಾನೆ. ಸಾಪೇಕ್ಷವಾಗಿ, ವಿಸ್ತಾರವಾದ, ಅಧಿಕ ವಿಷಯ ಒಳಗೊಂಡ, ಈ ಪರಿಸ್ಥಿತಿಗಳಲ್ಲಿ ಜಾನನು ನೈತಿಕವಾಗಿ ಸ್ಮಿಥ್ ನನ್ನು ಭೇಟಿ ಮಾಡುವ ಅಗತ್ಯವಿಲ್ಲ.

ಗಂಭೀರವಾಗಿ ಗಾಯಗೊಂಡ ಬ್ರೌನನಿಗೆ ಸಹಾಯ ಮಾಡಲು ಕೇವಲ ಜಾನ್ ಮಾತ್ರ ಇದ್ದ ಎನ್ನುವುದನ್ನು 'ಆರ್' 1/4 ಎಂದು ಸೂಚಿಸೋಣ. ಆಗ ನಾವು 'ಪಿ'ಯು 'ಕ್ಯು'ವನ್ನು ಬಯಸಿದರೂ, 'ಆರ್' 'ಕ್ಯು'ವನ್ನು ಬಯಸುವುದಿಲ್ಲ ಎನ್ನಬಹುದು. 'ಕ್ಯು'ಗೆ 'ಪಿ'ಯಿಂದ ವಿಧಿಸಲಾಗಿದ್ದ ನೈತಿಕ ಅಗತ್ಯ 'ಆರ್' ನಿಂದ ಮೇಲ್ಸವಾರಿ ಮಾಡಲ್ಪಟ್ಟಿತು ಅಥವಾ ಸೋಲಿಸಲ್ಪಟ್ಟಿತು.[8] ಜ್ಞಾನಶಾಸ್ತ್ರೀಯ ಸಂಗತಿಗಳಲ್ಲಿ ಒಬ್ಬನ ನಂಬಿಕೆಯ ಸಮರ್ಥನೆ ಆತನ ಒಟ್ಟು ಮೊತ್ತದ ಸಾಕ್ಷ್ಯಗಳನ್ನು ಆಧರಿಸುತ್ತದೆ. ಹಾಗೆಯೇ ನೈತಿಕ ಸಂಗತಿಯಲ್ಲೂ ಸರಿಯಾದ ಕಾರ್ಯನಿರ್ವಹಣೆ ಒಬ್ಬನ ಒಟ್ಟು ಮೊತ್ತದ ಪರಿಸ್ಥಿತಿಗಳನ್ನು ಆಧರಿಸುತ್ತದೆ ಎನಿಸುತ್ತದೆ. ಒಬ್ಬ ನಿರ್ವಹಿಸಿದ ಕೆಲ ನಿರ್ದಿಷ್ಟ ನಡತೆಗಳ ಕಾರಣಗಳು ಬೇರೆ ಅಳವುಗಳಿಂದ ಸೋಲಿಸಲ್ಪಡುವಂತೆ, ನಂಬಲು ಒಬ್ಬನ ಕಾರಣಗಳು ಮುಂಬರುವ ಸಾಕ್ಷಂ್ಯಗಳಿಂದ ಸೋಲಿಸಲ್ಪಡಬಹುದು.

ಈ ಅಧ್ಯಾಯದಲ್ಲಿ ನಾವು, ಪ್ರಾತಿಪಾದಿಕ ಜ್ಞಾನವನ್ನು ಗುರುತು ಜ್ಞಾನ ಮತ್ತು ಕಾರ್ಯಜ್ಞಾನಗಳಿಂದ ವಿಭಿನ್ನವಾಗಿ ಗುರುತಿಸಿದ್ದೇವೆ. ಪ್ರಾತಿಪಾದಿಕ ಜ್ಞಾನವನ್ನು ಸಮರ್ಥಿತ ಸತ್ಯ ನಂಬಿಕೆ ಎಂದು ಪರಿಚಯಿಸಿ, ಸಂಕ್ಷಿಪ್ತವಾಗಿ ನಂಬಿಕೆ, ಸತ್ಯ, ಮತ್ತು ಜ್ಞಾನಾತ್ಮಕ ಸಮರ್ಥನೆಗಳ ಬಗೆಗೆ ನೋಟ ಹರಿಸಿದ್ದೇವೆ. ಮುಂದಿನ ಅಧ್ಯಾಯಗಳಲ್ಲಿ ಹೆಚ್ಚು ವಿಸ್ತಾರವಾಗಿ ಸಮರ್ಥನೆಯ ಸ್ವಭಾವದ ಬಗ್ಗೆ ಕೆಲ ದೃಷ್ಟಿಗಳನ್ನು ಪರಿಶೀಲಿಸುತ್ತೇವೆ. ಮುಂದಿನ ಅಧ್ಯಾಯದಲ್ಲಿ, ಹೇಗಾದರೂ ನಾವು ಜ್ಞಾನ ಸಮರ್ಥಿತ ಸತ್ಯ ನಂಬಿಕೆ ಎನ್ನುವ ದೃಷ್ಟಿಯ ಬಗೆಗೆ ಕೆಲ ಆಕ್ಷೇಪಣೆಗಳನ್ನು ನೋಡುತ್ತೇವೆ. (ಜ್ಞಾನವನ್ನು) ಜ್ಞಾನದ ಈ ಸರಳ ದೃಷ್ಟಿಕೋನದ ಪರಿಚಯ ಸಮಂಜಸವಲ್ಲ ಎಂದು ಅರಿಯಲು ಈ ಆಕ್ಷೇಪಣೆಗಳು ಪ್ರಮುಖವಾಗುತ್ತದೆ

(ಪರಿಚಯಿಸಿದ ಸರಳ ದೃಷ್ಟಿಕೋನ ಅತ್ಯಂತ ಸಮಂಜಸವಲ್ಲ ಎಂದು ಅರಿಯಲು ಈ ಆಕ್ಷೇಪಣೆಗಳು ಪ್ರಮುಖವಾಗುತ್ತವೆ.)

ಈ ಆಕ್ಷೇಪಣೆಗಳು ಮತ್ತು ಅವುಗಳಿಗೆ ಪ್ರತಿಕ್ರಿಯೆಗಳನ್ನು ಪರಿಗಣಿಸುವಾಗ ನಾವು "ಜ್ಞಾನವೆಂದರೆ ಏನು?," ಎನ್ನುವ ಪುರಾತನ ಪ್ರಶ್ನೆಗೆ ಉತ್ತರವನ್ನು ಹುಡುಕುತ್ತಿರುತ್ತೇವೆ.

**ಡಾ. ಎ.ಜಿ.ಗೋಪಾಲ ಕೃಷ್ಣ ಕೊಳ್ತಾಯ**